KARN010009582014

Presented on : 03-07-2014
Registered on: 03-07-2014
Decided on: 05-06-2026
Duration: 11 years 11 months 3 days

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.

**:ಉಪಸ್ಥಿತರು:**

M H ANNAYYANAVAR

Digitally signed by M H ANNAYYANAVAR
Date: 2026.06.05 17:09:05 +0530

ಶ್ರೀಯುತ ಎಂ.ಹೆಚ್.ಅಣ್ಣಯ್ಯನವರ, ಬಿಕಾಂ.ಎಲ್.ಎಲ್.ಬಿ. (ವಿಶೇಷ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.

## ದಿನಾಂಕ 5 ನೇ ಜೂನ್ ಮಾಹೆ 2026

## ಸ್ಪೆಷಲ್.ಸಿ.ಸಂಖ್ಯೆ 48/2014

ಫಿರ್ಯಾದಿದಾರರು: ಕರ್ನಾಟಕ ಸರ್ಕಾರದ ಪರವಾಗಿ
ಲೋಕಾಯುಕ್ತ ಪೊಲೀಸರು, ರಾಮನಗರ.
**(ಪರವಾಗಿ: ಶ್ರೀ ವಿಶೇಷ ಅಭಿಯೋಜಕರು)**

:: ವಿರುದ್ಧ ::

ಆರೋಪಿತರು: 1. ಶ್ರೀ ಹರ್ಷ.ಎಂ.,
ಬಿನ್ ಸಿ.ಕೆ.ಮಹಾಲಿಂಗಪ್ಪ,
ವಯಸ್ಸು 36.
ದ್ವಿ.ದ.ಸಹಾಯಕರು, ತಾಲ್ಲೂಕು ಕಚೇರಿ,
ರಾಮನಗರ.
ವಾಸಃ ನಂ.33/2, 4 ನೇ ಅಡ್ಡರಸ್ತೆ, 2 ನೇ ಮುಖ್ಯರಸ್ತೆ,
ಅವಲಹಳ್ಳಿ, ಬೆಂಗಳೂರು - 26.

2. ಶ್ರೀ ಮೋಹನ್ ಉಃ ಎಂ.ಎನ್.ಮೋಹನ್ ಕುಮಾರ್,
ಬಿನ್ ಲೇಟ್ ನಾಗಪ್ಪ,

ವಯಸ್ಸು 25 ವರ್ಷ.
ಗ್ರಾಮಲೆಕ್ಕಾಧಿಕಾರಿ, ರಾಮನಗರ,
ವಾಸಃ ಅವುಡದೇವನಹಳ್ಳಿ, ಮರಸೂರು ಅಂಚೆ,
ಕಸಬಾ ಹೋಬಳಿ, ಆನೇಕಲ್ ತಾಲ್ಲೂಕು.
ಬೆಂಗಳೂರು ಜಿಲ್ಲೆ.
**(1** ನೇ ಆರೋಪಿತರ ಪರವಾಗಿ ಶ್ರೀ ಆರ್**.**ಎನ್**.,** ವಕೀಲರು**,**
**2** ನೇ ಆರೋಪಿತರ ಪರ ಶ್ರೀ ಎಂ**.**ಎಂ**.,** ವಕೀಲರು**)**

*********

| | | | |
|---|---|---|---|
| 1. | ಘಟನೆ ಜರುಗಿದ ದಿನಾಂಕ | : | 06-08-2010 |
| 2. | ಘಟನೆ ವರದಿಯಾದ ದಿನಾಂಕ | : | 06-08-2010 |
| 3. | ಆರೋಪಿತರನ್ನು ಬಂಧಿಸಿದ ದಿನಾಂಕ | : | 06-08-2010 |
| 4. | ವಿಚಾರಣಾ ಪ್ರಾರಂಭ ದಿನಾಂಕ | : | 21-03-2019 |
| 5. | ವಿಚಾರಣಾ ಮುಕ್ತಾಯ ದಿನಾಂಕ | : | 19-10-2023 |
| 6. | ಫಿರ್ಯಾದಿಯ ಹೆಸರು | : | ಶ್ರೀ ಎ.ಜೆ.ಗುರುರಾಜು |
| 7. | ಆರೋಪಿಸಲ್ಪಟ್ಟ ಆಪಾದನಾ ಕಲಂಗಳು | : | ಲಂಚ ನಿಯಂತ್ರಣ ಕಾಯಿದೆ ಕಲಂ.7, 13(1)(d) ಸಹಕಲಂ. 13(2)ರ ಅಡಿಯಲ್ಲಿ |
| 8. | ನ್ಯಾಯಾಧೀಶರ ಅಭಿಪ್ರಾಯ | : | ಆರೋಪಿತರು ಕೃತ್ಯ ಎಸಗಿರುವುದು ನಿಸ್ಸಂಶಯವಾಗಿ ಸಾಭೀತಾಗಿಲ್ಲ. |
| 9. | ಶಿಕ್ಷೆ ಅಥವಾ ಆದೇಶ | : | ಅಂತಿಮ ಆದೇಶದಂತೆ |

**(**ಎಂ.ಹೆಚ್**.** ಅಣ್ಣಯ್ಯನವರ**)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಮನಗರ**.**

******

## :: ತೀರ್ಪು ::

ಪ್ರಸ್ತುತ ಪ್ರಕರಣದಲ್ಲಿ ಚಾಸಾ.24/ಪ್ರಾಸಾ.14 – ಆರ್.ಪಿ.ಅನಿಲ್, ಪೊಲೀಸ್ ಇನ್ಸಪೆಕ್ಟರ್, ಕರ್ನಾಟಕ ಲೋಕಾಯುಕ್ತ, ರಾಮನಗರ ಇವರು ಆರೋಪಿತರ ವಿರುದ್ಧ

ಭ್ರಷ್ಟಾಚಾರ ತಡೆ ಕಾನೂನು ಕಲಂ.7 ಮತ್ತು 13(1)(ಡಿ) ಸಹಕಲಂ.13(2)ರ ಅಡಿಯಲ್ಲಿ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ.

2. <u>ಈ ಕೇಸಿನ ಸಂಕ್ಷಿಪ್ತ ಸಾರಾಂಶವೇನೆಂದರೆ:</u> ಚಾಸಾ.1/ಪ್ರಾಸಾ.1 - ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ರಾಮನಗರದಲ್ಲಿ ದಿನಾಂಕ 06.08.2020 ರಂದು ನಿಶಾನೆ ಪಿ.1 - ದೂರು ಕೊಟ್ಟಿದ್ದು, ದೂರಿನಲ್ಲಿ ದಿನಾಂಕ 19.04.1982 ರಂದು ರಾಮನಗರ ತಾಲ್ಲೂಕು, ಕೈಲಾಂಚ ಹೋಬಳಿ, ಅಚ್ಚಲು ಗ್ರಾಮದ ಸರ್ವೆ ನಂ.17 - 1 ಎಕರೆ 22 ಗುಂಟೆಯನ್ನು ಭೂ ನ್ಯಾಯ ಮಂಡಳಿಯಿಂದ ಪಿರ್ಯಾದಿಯ ತಾತನಿಗೆ ಮಂಜೂರಾಗಿದ್ದು, ನಂತರ ದಿನಾಂಕ 09-06-2009 ರಂದು ಪಿರ್ಯಾದಿಯ ತಾತನಿಗೆ ಜಮೀನಿನ ಬಗ್ಗೆ ಇಡುವಳಿದಾರರಾಗಿ ಖಾತೆಯನ್ನು ಮಾಡುವುದು, ಆ ಪ್ರಕಾರ ಹಿಂಬರವನ್ನೂ ಸಹಿತ ಕೊಟ್ಟಿರುತ್ತಾರೆ. ಸದರಿ ಪಿರ್ಯಾದಿಯ ತಾತ ಮರಣ ಹೊಂದಿದ್ದರಿಂದ ಅವರ ತಂದೆ ಜಯರಾಮ್ ಇವರ ಹೆಸರಿನಲ್ಲಿ ಖಾತೆ ಬದಲಾವಣೆ ಮಾಡಬೇಕಾಗಿದ್ದು ದಿನಾಂಕ 16-09-2009 ರಂದು ತಾಲ್ಲೂಕು ಕಚೇರಿ ರಾಮನಗರದಲ್ಲಿ ಖಾತೆ ಬದಲಾವಣೆಗೆ ಅರ್ಜಿ ಸಲ್ಲಿಸಿದಾಗ ಖಾತೆ ಬದಲಾವಣೆ ಮಾಡಿಕೊಟ್ಟಿರುವುದಿಲ್ಲ ಅನೇಕ ಬಾರಿ ಭೇಟಿಯಾದರೂ ಸಹಿತ ಮಾಡಿಕೊಟ್ಟಿಲ್ಲದೇ ಇರುವುದರಿಂದ ಈಗ ಸುಮಾರು 5-6 ದಿನಗಳ ಹಿಂದೆ ರಾಮನಗರ ತಹಶೀಲ್ದಾರ್ ಶ್ರೀ ಟಿ.ಬಿ.ನಟೇಶ್ ಇವರನ್ನು ಭೇಟಿಯಾಗಿ ಕೇಳಿದಾಗ ಪೈಲ್ ತರಿಸಿಕೊಂಡು ಆಮೇಲೆ ನೋಡಿ ಮಾಡಿಕೊಡುತ್ತಾನೆ ಅಂತಾ ಹೇಳಿರುತ್ತಾರೆ. ನಂತರ ಸದರಿ ಕಚೇರಿಯಲ್ಲಿರತಕ್ಕಂಥ 1 ನೇ ಆರೋಪಿ - ಹರ್ಷ ಮತ್ತು 2 ನೇ ಆರೋಪಿ - ಮೋಹನ್ ಎಂಬವವರು ಕರೆದು ನಿನ್ನ ಕೆಲಸ ಅಷ್ಟು ಸುಲಭವಾಗಿ

ಆಗುವುದಿಲ್ಲ, ನೀನು ಹಣವನ್ನು ಕೊಟ್ಟರೆ ಮಾತ್ರ ಕೆಲಸ ಆಗುತ್ತದೆ ಅಂತಾ ಹೇಳಿದರು. ಆಗ ನಾನು ಎಷ್ಟು ಕೊಡಬೇಕು ಅಂತ ಕೇಳಿದೆನು ಅದಕ್ಕೆ ಅವರು ರೂ.60,000/- ಹಣವನ್ನು ಕೊಡಬೇಕು ಅಂತಾ ಕೇಳಿದರು. ದಿನಾಂಕ 03-08-2010 ರಂದು ಲೋಕಾಯುಕ್ತ ಪೊಲೀಸ್ ಠಾಣೆಗೆ ಹೋಗಿ ವಿಚಾರ ತಿಳಿಸಿ ಟೇಪ್ ರೆಕಾರ್ಡರನ್ನು ತೆಗೆದುಕೊಂಡು ಹೋದೆನು. ಆಗ ಅವರು ರಾಮನಗರ ಜೂನಿಯರ್ ಕಾಲೇಜಿನ ಮೈದಾನದಲ್ಲಿ ಆರೋಪಿತರು ಪಿರ್ಯಾದಿಯನ್ನು ಭೇಟಿಯಾಗಿ ರೂ.50,000/- ಹಣವನ್ನು ಕೊಡಬೇಕು ಅಂತಾ ಕೇಳಿದರು. ಇವರಿಬ್ಬರ ನಡುವೆ ನಡೆದ ಸಂಭಾಷಣೆಯನ್ನು ಟೇಪ್ ರೆಕಾರ್ಡರಿನಲ್ಲಿ ನಮೂದು ಆಗಿರುತ್ತಾರೆ. ದಿನಾಂಕ 05.08.2010 ರಂದು ಮಧ್ಯಾಹ್ನ 3.30 ಗಂಟೆಗೆ 2 ನೇ ಆರೋಪಿ ನನ್ನ ಮೊಬೈಲ್ ನಂ.9741069867 ಗೆ ಆತನ ಮೊಬೈಲ್ ನಂ.9535017776 ಫೋನ್‌ನಿಂದ ಕರೆ ಮಾಡಿ ನೀನು ಹಣವನ್ನು ನನ್ನ ಕೈಗೆ ತಂದು ಕೊಡು. ನಾನು ಮತ್ತು 1 ನೇ ಆರೋಪಿ - ಹರ್ಷ ಇಬ್ಬರು ಒಟ್ಟಿಗೆ ಸೇರಿ ನಿನ್ನ ಕೆಲಸ ಮಾಡಿಕೊಡುತ್ತೇವೆ, ನಾವಿಬ್ಬರು ನಂತರ ಹಣವನ್ನು ಹಂಚಿಕೊಳ್ಳುತ್ತೇವೆ ಅಂತಾ ಹೇಳಿದರು. ನಾನು ನನ್ನ ಹತ್ತಿರ ಅಷ್ಟು ಹಣ ಇಲ್ಲ ಅಂತಾ ಹೇಳಿದ್ದಕ್ಕೆ ಅವರು ರೂ.30,000/-ನ್ನು ಕೊಡು ಅಂತಾ ಕೇಳಿದರು. ಈ ದಿನ ಬೆಳಿಗ್ಗೆ 10.20 ಗಂಟೆಯಲ್ಲಿ ಫೋನ್ ಮಾಡಿ ರೂ.25 ಸಾವಿರ ಹಣವನ್ನು ತೆಗೆದುಕೊಂಡು ಬಾ ಎಂದು 2 ನೇ ಆರೋಪಿ - ಮೋಹನ್ ಇವರು ಪಿರ್ಯಾದಿಯ ಮೊಬೈಲಿಗೆ ಫೋನ್ ಮಾಡಿದ್ದು, ಉಳಿದ ಹಣವನ್ನು ಕೆಲಸ ಆದ ಮೇಲೆ ಕೊಡುವಂತೆ ಹೇಳಿರುತ್ತಾರೆ. ನಂತರ ಲಂಚವನ್ನು ಕೊಟ್ಟು ಕೆಲಸ ಮಾಡಿಸಿಕೊಳ್ಳಲು ಇಷ್ಟವಿಲ್ಲದೇ ಇರುವುದರಿಂದ ಸದರಿ ಜಮೀನು ತನ್ನ ತಾತನ ಹೆಸರಿನಲ್ಲಿರತಕ್ಕಂಥದ್ದನ್ನು ತಂದೆಯ

ಹೆಸರಿನಲ್ಲಿ ಖಾತೆ ಮಾಡಲು ಲಂಚಕ್ಕೆ ಒತ್ತಾಯ ಮಾಡುತ್ತಿದ್ದುದ್ದರಿಂದ ಈ ವಿಷಯಕ್ಕೆ ಸಂಬಂಧಪಟ್ಟಂತೆ ಟೇಪ್ ರೆಕಾರ್ಡರನ್ನು ಮತ್ತು ರೂ.25 ಸಾವಿರ ಹಣವನ್ನು ಪೊಲೀಸ್ ಠಾಣೆಗೆ ಹಾಜರುಪಡಿಸಿ ನಿಶಾನೆ ಪಿ.1 - ದೂರು ಕೊಟ್ಟಿರುತ್ತಾರೆ.

3. ಸದರಿ ದೂರನ್ನು ಲೋಕಾಯುಕ್ತ ಡಿವೈಎಸ್‌ಪಿ ಪ್ರಾಸಾ.13/ಚಾಸಾ.21 - ಹೆಚ್.ಮಂಜಪ್ಪ ಇವರು ಪಡೆದುಕೊಂಡು ತಮ್ಮ ಠಾಣಾ ಮೊಕದ್ದಮೆ ಸಂಖ್ಯೆ 5/2010 ಕೇಸು ದಾಖಲು ಮಾಡಿಕೊಂಡು ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗೆ ಸಲ್ಲಿಸಿರುತ್ತಾರೆ. ನಂತರ ದೂರು ಮತ್ತು ದಾಖಲೆಯನ್ನು ಹಾಜರುಪಡಿಸಿದ ನಂತರ ಜಿಲ್ಲಾ ನೋಂದಣಿ ಅಧಿಕಾರಿ ಉಪನಿರ್ದೇಶಕರ ಸಾರ್ವಜನಿಕ ಇಲಾಖೆಯವರಿಗೆ ಪಂಚರನ್ನು ಕಳುಹಿಸಿಕೊಡುವುದರ ಬಗ್ಗೆ ಪತ್ರ ಬರೆದಿದ್ದ ಪ್ರಕಾರ ಚಾಸಾ.2 – ಯೋಗೇಶ್, ಶಿಕ್ಷಣ ಇಲಾಖೆ ವತಿಯಿಂದ, ಚಾಸಾ.3 - ಜಿ.ಹೆಚ್.ರಾಜಪ್ಪ ಇವರು ಇಬ್ಬರೂ ಹಾಜರಾಗಿದ್ದು, ಸದರಿಯವರಿಗೆ ಪಿರ್ಯಾದಿಯನ್ನು ಪರಿಚಯ ಮಾಡಿಕೊಟ್ಟು ವಿಷಯ ತಿಳಿಸಲಾಗಿ ಪಿರ್ಯಾದಿ ಲಂಚವಾಗಿ ಕೊಡಲು ತಂದಿದ್ದಂಥ ರೂ.500 ಮುಖಬೆಲೆಯ 8 ನೋಟುಗಳು, ರೂ.1000 ಮುಖಬೆಲೆಯ 21 ನೋಟುಗಳನ್ನು ಮತ್ತು ಟೇಪ್ ರೆಕಾರ್ಡರನ್ನು ಹಾಜರುಪಡಿಸಿದ್ದು, ಸದರಿ ಪಂಚರಿಗೆ ತಿಳಿಸಿ ಹೇಳಲಾಗಿ ನಂತರ ಸದರಿ ನೋಟುಗಳ ನಂಬರನ್ನು ಒಂದು ಪ್ರತ್ಯೇಕವಾದ ಹಾಳೆಯಲ್ಲಿ ಬರೆಯಲಾಯಿತು. ನಂತರ ಚಾಸಾ.12 - ಬೋರೇಗೌಡ ಇವರಿಗೆ ನೋಟುಗಳಿಗೆ ಪಿನಾಪ್ತಲಿನ್ ಪೌಡರ್ ಸವರುವಂತೆ ತಿಳಿಸಿದ್ದು, ಅದರಂತೆ ಎಲ್ಲಾ ನೋಟುಗಳಿಗೆ ಸವರಿದ್ದು, ನೋಟುಗಳನ್ನು ಎಣಿಸುವಂತೆ ಪಂಚ-1 ಇವರಿಗೆ ಎಣಿಸುವಂತೆ ಹೇಳಿದ್ದು, ಇದಕ್ಕೆ

ಸಂಬಂಧಪಟ್ಟಂತೆ ವಿವರವಾಗಿ ನಿಶಾನೆ ಪಿ.25 - ಹಾಳೆಯಲ್ಲಿ ಬರೆದಿರುತ್ತಾರೆ. ನಂತರ ಪಂಚ ಸಾಕ್ಷಿ 2 - ರಾಚಪ್ಪ ಇವರಿಗೆ ಪಿರ್ಯಾದಿಯ ಜೇಬನ್ನು ಪರಿಶೀಲಿಸುವಂತೆ ಸೂಚಿಸಿದ್ದು, ಆಗ ಪರಿಶೀಲಿಸಿದಾಗ ಏನೂ ಇರುವುದಿಲ್ಲ ಅಂತಾ ಮಾಹಿತಿ ನೀಡಿರುತ್ತಾರೆ. ನಂತರ ಪಿರ್ಯಾದಿ 2 ನೇ ಆರೋಪಿಗೆ ಫೋನ್ ಮಾಡಿ ಎಲ್ಲಿಗೆ ಬರಬೇಕೆಂದು ಕೇಳಿ ತಿಳಿದುಕೊಳ್ಳುವಂತೆ ತಿಳಿಸಿದ್ದು, ಆ ಪ್ರಕಾರ ಬಂದರೆ ನಾನು ಹಣ ಕೊಡುತ್ತೇನೆ ಅಂತಾ ಹೇಳು ಅಂತಾ ಹೇಳಿದಾಗ ಹಣ ಕೊಟ್ಟ ನಂತರ ತಲೆ ಸವರಿಕೊಂಡು ಸೂಚನೆ ಕೊಡುವಂತೆ ತಿಳಿಸಲಾಗಿರುತ್ತದೆ. ನಂತರ ಸಿಬ್ಬಂದಿ ಹಾಗೂ ಚಾಸಾ.18 ಕೃಷ್ಣಮೂರ್ತಿ ಇವರಿಗೆ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸುವಂತೆ ಹೇಳಿದ್ದು, ಅದರಂತೆ ಒಂದು ಬಟ್ಟಲಿನಲ್ಲಿ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರು ಮಾಡಿರುತ್ತಾರೆ. ಮಾದರಿಗಾಗಿ ಒಂದು ಬಾಟಲಿಯಲ್ಲಿ ತೆಗೆದು ಕ್ಯೂ ಎಂಬ ಅಕ್ಷರದಿಂದ ಸೀಲು ಮಾಡಲಾಗಿರುತ್ತದೆ. ಪಂಚ ಸಾಕ್ಷಿ 2 ಇವರ ಕೈಯನ್ನು ದ್ರಾವಣದಲ್ಲಿ ಅದ್ದಿದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಅದನ್ನು ಒಂದು ಬಾಟಲಿಗೆ ಹಾಕಿ ಕ್ಯೂ ಎಂಬ ಅಕ್ಷರಿಂದ ಸೀಲು ಮಾಡಲಾಯಿತು. ನಂತರ ಪಿರ್ಯಾದಿ ಪಂಚರಿಗೆ ಸೋಡಿಯಂ ಕಾರ್ಬೋನೇಟ್ ದ್ರಾವಣದ ರಾಸಾಯನಿಕ ಗುಣಗಳ ಬಗ್ಗೆ ತಿಳಿಸಲಾಯಿತು. ಪಿರ್ಯಾದಿಯನ್ನು ವಿಚಾರಿಸಿದಾಗ 2 ನೇ ಆರೋಪಿ - ಮೋಹನ್, ರಾಮನಗರ ಶಾನ್ ಥಿಯೇಟರ್ ಹತ್ತಿರ ಬರುವಂತೆ ತಿಳಿಸಿದ್ದು, ನಂತರ ಪಂಚರ ಸಮೇತ ಅಲ್ಲಿಗೆ ಹೋಗಿ ಪಿರ್ಯಾದಿ ಒಂದು ಟೇಪ್ ರೆಕಾರ್ಡನ್ನು ಕೊಟ್ಟು ಆರೋಪಿಗೆ ಮಾತನಾಡುವ ಮೊದಲು ರೆಕಾರ್ಡರನ್ನು ಆನ್ ಮಾಡಿಕೊಂಡು ತನ್ನ ಮತ್ತು ಆರೋಪಿಯ ಸಂಭಾಷಣೆಯನ್ನು

ರೆಕಾರ್ಡ್ ಮಾಡಿಕೊಳ್ಳುವಂತೆ ತಿಳಿಸಿದರು. ನಂತರ ಪಿರ್ಯಾದಿ ಮತ್ತು ಸಿಬ್ಬಂದಿ ಪಂಚರು ಎಲ್ಲರೂ ಸೇರಿಕೊಂಡು ಮಧ್ಯಾಹ್ನ 1.00 ಗಂಟೆಯಿಂದ 2.30 ಗಂಟೆ ಸಮಯದಲ್ಲಿ ಇದಕ್ಕೆ ಸಂಬಂಧಪಟ್ಟಂತೆ ನಿಶಾನೆ ಪಿ.2 - ಪ್ರಾಯೋಗಿಕ ಪಂಚನಾಮೆ ಮಾಡಿದ್ದು, ಆ ಸಮಯದಲ್ಲಿ ನಿಶಾನೆ ಪಿ.4 ರಿಂದ ಪಿ.15 - ಫೋಟೋಗಳನ್ನು ತೆಗೆಯಲಾಗಿರುತ್ತದೆ. ನಂತರ ಮಧ್ಯಾಹ್ನ 2.20 ಗಂಟೆಗೆ ಪಿರ್ಯಾದಿ, ಪಂಚರು, ಸಿಬ್ಬಂದಿಯವರು ಸೇರಿಕೊಂಡು ಇಲಾಖಾ ಜೀಪು ಸಂಖ್ಯೆ ಕೆಎ-42-ಜಿ-1269 ರಲ್ಲಿ ಶಾನ್ ಟಾಕೀಸ್ ಹತ್ತಿರ ಸುಮಾರು 500 ಅಡಿ ದೂರದಲ್ಲಿ ವಾಹನವನ್ನು ನಿಲ್ಲಿಸಿ ಪಿರ್ಯಾದಿ, ಪಂಚ ಸಾಕ್ಷಿ-1 ಇವರಿಗೆ ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ಕೊಟ್ಟ ಸೂಚನೆಯನ್ನು ಕಳುಹಿಸಿದ್ದು ಹಾಗೂ ಸಿಬ್ಬಂದಿ ಇನ್ನೊಬ್ಬ ಪಂಚ ಅಲ್ಲೇ ಮರೆಯಲ್ಲಿ ಕಾಯುತ್ತಾ ನಿಂತಿರುತ್ತಾರೆ. ಮಧ್ಯಾಹ್ನ 2.40 ಗಂಟೆಗೆ ಪಿರ್ಯಾದಿ ಟಾಕೀಸ್ ನಿಂದ ಹೊರ ಬಂದು ತಲೆಯನ್ನು ಸವರಿಕೊಂಡು ಸೂಚನೆ ಕೊಟ್ಟ ನಂತರ ಪಂಚ - 2 ಸಾಕ್ಷಿ ಹಾಗೂ ತನಿಖಾಧಿಕಾರಿಗಳೆಲ್ಲರೂ ಸೇರಿಕೊಂಡು ಶಾನ್ ಟಾಕೀಸ್ ಕಾಂಪೌಂಡ್ ಒಳಗಡೆ ಹೋದರು. ಪಿರ್ಯಾದಿ ಒಬ್ಬ ಆಸಾಮಿಯನ್ನು ತೋರಿಸಿದ ಆತ 2 ನೇ ಆರೋಪಿ - ಮೋಹನ್ ಆಗಿದ್ದು, ಆತನಿಗೆ ರೂ.25 ಸಾವಿರ ಹಣವನ್ನು ಕೊಟ್ಟಿದ್ದು, ಅದನ್ನು ಅವರು ಜೀನ್ಸ್ ಪ್ಯಾಂಟಿನ ಎಡಭಾಗದಲ್ಲಿಟ್ಟುಕೊಂಡನು ಅಂತಾ ತೋರಿಸಿದ್ದು, ಆತನನ್ನು ವಿಚಾರಿಸಿದಾಗ ಒಪ್ಪಿಕೊಂಡು ಹಾಜರುಪಡಿಸಿರುತ್ತಾರೆ. ನಂತರ ಸಿಬ್ಬಂದಿ ಬೋರೇಗೌಡ ಇವರು ಎರಡು ಬಟ್ಟಲಿನಲ್ಲಿ ಸೋಡಿಯಂ ಕಾರ್ಬೋನೇಟನ್ನು ತಯಾರಿಸುವಂತೆ ಹೇಳಿದಾಗ ಶಾನ್ ಟಾಕೀಸ್ ಸಿಮೆಂಟ್ ಕಟ್ಟೆ ಮೇಲೆ ಎರಡು ಬಟ್ಟಲಿನಲ್ಲಿ ದ್ರಾವಣವನ್ನು ತಯಾರಿಸಿದ್ದು ಅದು ಬಣ್ಣ ರಹಿತವಾಗಿತ್ತು ಆ ದ್ರಾವಣದಲ್ಲಿ ಸ್ವಲ್ಪ

ದ್ರಾವಣವನ್ನು ಒಂದು ಬಾಟಲಿಯಲ್ಲಿ ಮಾದರಿಗಾಗಿ ತೆಗೆದುಕೊಂಡು ಕ್ಯೂ ಅಕ್ಷರದಿಂದ ಸೀಲು ಮಾಡಲಾಯಿತು. ನಂತರ ಆರೋಪಿಯ ಬಲಗೈ ಬೆರಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಅದನ್ನು ಒಂದು ಬಾಟಲಿಯಲ್ಲಿ ಹಾಕಿ ಕ್ಯೂ ಅಕ್ಷರದಿಂದ ಸೀಲು ಮಾಡಲಾಯಿತು. ನಂತರ ಎಡಗೈ ಬೆರಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಅದನ್ನು ಒಂದು ಬಾಟಲಿಯಲ್ಲಿ ಹಾಕಿ ಕ್ಯೂ ಅಕ್ಷರದಿಂದ ಸೀಲು ಮಾಡಲಾಯಿತು. ನಂತರ ಆರೋಪಿ ಪ್ಯಾಂಟಿನ ಹಿಂಭಾಗ ಎಡ ಜೇಬಿನಲ್ಲಿದ್ದ ಲಂಚದ ಹಣವನ್ನು ಹಾಜರುಪಡಿಸಿದ್ದು, ಅವುಗಳ ಮೌಲ್ಯ ರೂ.25,000/- ಆಗಿತ್ತು. ರೂ.500 ಮುಖ ಬೆಲೆಯ 8 ನೋಟುಗಳು, ರೂ.1000 ಮುಖಬೆಲೆಯ 20 ನೋಟುಗಳು ಇದ್ದು, ಅವುಗಳನ್ನು ಕವರಿನಲ್ಲಿ ಹಾಕಿ ಸೀಲು ಮಾಡಲಾಯಿತು. ನಂತರ ಆರೋಪಿಗೆ ಬದಲಿ ಪ್ಯಾಂಟಿನ ವ್ಯವಸ್ಥೆ ಮಾಡಿ ಆತ ಧರಿಸಿದ್ದ ಪ್ಯಾಂಟನ್ನು ತೆಗೆದುಕೊಂಡು ಪೊಲೀಸ್ ಇಲಾಖೆ ಸಿಬ್ಬಂದಿ ಬೋರೇಗೌಡ ಅವರು ತಯಾರಿಸಿದ ಒಂದು ಬಟ್ಟಲಿನಲ್ಲಿ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ಹಾಗೂ ಆರೋಪಿ ಪ್ಯಾಂಟಿನ ಹಿಂಭಾಗದ ಹಾಗೂ ಎಡಭಾಗದ ಜೇಬನ್ನು ಸದರಿ ದ್ರಾವಣದಲ್ಲಿ ಅದ್ದಿ ತೊಳೆದಾಗ ಗುಲಾಬಿ ಬಣ್ಣಕ್ಕೆ ತಿರುಗಿದ್ದು ಸದರಿ ದ್ರಾವಣವನ್ನು ಒಂದು ಬಾಟಲಿಯಲ್ಲಿ ಹಾಕಿ ಕ್ಯೂ ಅಕ್ಷರದಿಂದ ಸೀಲು ಮಾಡಲಾಗುತ್ತದೆ. ನಂತರ ಆ ದಿವಸ ಆರೋಪಿ ಹಾಕಿಕೊಂಡಂಥ ಪ್ಯಾಂಟನ್ನು ಒಂದು ಕವರಿನಲ್ಲಿ ಹಾಕಿ ಪ್ಯಾಕ್ ಮಾಡಲಾಯಿತು. ನಂತರ ಕ್ಯೂ ಎಂಬ ಅಕ್ಷರದ ಸೀಲನ್ನು ಪಂಚ ಸಾಕ್ಷಿ - 1 ಇವರಿಗೆ ಕೊಟ್ಟಿದ್ದು, ಸೀಲನ್ನು ನ್ಯಾಯಾಲಯದಲ್ಲಿ ಅಥವಾ ತನಿಖಾಧಿಕಾರಿ

ಕೇಳಿದಾಗ ಹಾಜರುಪಡಿಸಬೇಕು ಅಂತಾ ತಿಳಿಸಲಾಗಿರುತ್ತದೆ. ನಂತರ ಇದರ ಬಗ್ಗೆ ಆರೋಪಿಯನ್ನು ವಿಚಾರಿಸಿದಾಗ ಆರೋಪಿ ನಿಶಾನೆ ಪಿ.28 - ಸಮಜಾಯಿಷಿಯನ್ನೂ ಸಹಿತ ನೀಡಿರುತ್ತಾರೆ. ಆ ಸಮಜಾಯಿಷಿಯನ್ನು ಪಡೆದುಕೊಂಡಿದ್ದು, ನಂತರ ಸ್ಥಳದಲ್ಲಿ ಕಚ್ಚಾ ನಕಾಶೆಯನ್ನು ತಯಾರು ಮಾಡಲಾಗಿದ್ದು ಹಾಗೂ ಟ್ರಾಪ್ ಮಾಡಿದ ಸಮಯದಲ್ಲಿ ನಿಶಾನೆ ಪಿ.16 ರಿಂದ ಪಿ.20 ಫೋಟೋಗಳನ್ನು ತೆಗೆಯಲಾಗಿರುತ್ತದೆ. ಆ ಸ್ಥಳದಲ್ಲಿ ನಿಶಾನೆ ಪಿ.3 - ಟ್ರಾಪ್ ಪಂಚನಾಮೆ ಮಾಡಲಾಗಿರುತ್ತದೆ. ನಂತರ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಹಾಜರುಪಡಿಸಿ ಅಮಾನತ್ತುಪಡಿಸಿಕೊಂಡಂತ ವಸ್ತುಗಳನ್ನು ಪಿ.ಎಫ್ ನಂ.10/2010 ರಲ್ಲಿ ಅಳವಡಿಸಲಾಗಿರುತ್ತದೆ. ನಂತರ ಸದರಿ ಸಾಕ್ಷಿ ತನಿಖೆಯನ್ನು ಮುಂದುವರೆಸಿ ಸಾಕ್ಷಿದಾರರು ಆದ್ದಂತಾ ಚಾಸಾ.2, 3, 6, 7, 15 ರಿಂದ 19 ಇವರನ್ನು ವಿಚಾರ ಮಾಡಿ ಹೇಳಿಕೆ ಪಡೆದುಕೊಂಡಿದ್ದು ತಹಶೀಲ್ದಾರ್ ಇವರಿಗೆ ಆರೋಪಿಯ ಸೇವಾ ವಿವರಗಳಿಗೆ ಸಂಬಂಧಪಟ್ಟಂತೆ ದಾಖಲಾತಿ ಕೊಡುವ ಬಗ್ಗೆ ಕೋರಿಕೆ ಪತ್ರ ಕಳುಹಿಸಿದ್ದು, ಆ ದಾಖಲಾತಿಗಳನ್ನು ಸಹಿತ ಪಡೆದುಕೊಳ್ಳಲಾಗಿರುತ್ತದೆ. ಅಮಾನತ್ತುಪಡಿಸಿಕೊಂಡ ಸ್ಯಾಂಪಲ್ ಬಾಟಲಗಳನ್ನು ಪರೀಕ್ಷೆಗಾಗಿ ಎಫ್.ಎಸ್.ಎಲ್.ಗೆ ಪರೀಕ್ಷೆಗೋಸ್ಕರವಾಗಿ ಕಳುಹಿಸಿಕೊಡಲಾಗಿರುತ್ತದೆ. ಚಾಸಾ.2 ಮತ್ತು ಚಾಸಾ.3 ರವರ ಮರುಹೇಳಿಕೆಯನ್ನು ಪಡೆದುಕೊಂಡಿದ್ದು, ನಂತರ 1 ನೇ ಆರೋಪಿ ನಿರೀಕ್ಷಣಾ ಜಾಮೀನನ್ನು ಪಡೆದುಕೊಂಡು ಬಂದಿದ್ದು, ನಿರೀಕ್ಷಣಾ ಜಾಮೀನಿನ ಮೇಲೆ ಬಿಟ್ಟಿರುತ್ತಾರೆ. ನಂತರ ಆತನನ್ನು ವಿಚಾರ ಮಾಡಿದ್ದು ಆತನಿಂದ ಹೇಳಿಕೆ ಪಡೆಯಲಾಗಿರುತ್ತದೆ ಹಾಗೂ ಆತ ನಿಶಾನೆ ಪಿ.29 ರಂತೆ ಸಮಜಾಯಿಷಿಯನ್ನೂ ಸಹಿತ ನೀಡಿರುತ್ತಾರೆ. ಸದರಿ ಚಾಸಾ.2 ಮತ್ತು ಚಾಸಾ.3 ಇವರ

ಸಮಕ್ಷಮ ನಿಶಾನೆ ಪಿ.33 ಅಮಾನತ್ತು ಮಹಜರ್ ಮಾಡಲಾಗಿರುತ್ತದೆ. ನಂತರ ಸದರಿ ತನಿಖೆಯನ್ನು ಪೊಲೀಸ್ ಇನ್ಸ್ಪೆಕ್ಟರ್ - ಗೌತಮ್ ಇವರಿಗೆ ವಹಿಸಿಕೊಟ್ಟಿರುತ್ತಾರೆ.

4. ನಂತರ ಸದರಿ ಪೊಲೀಸ್ ಇನ್ಸ್ಪೆಕ್ಟರ್ - ಗೌತಮ್ ಇವರು ಈ ಕೇಸಿನ ಕಡತವನ್ನು ಪ್ರಾಸಾ.12/ಚಾಸಾ.22 – ಸಣ್ಣತಮ್ಮಪ್ಪಯ್ಯ ಒಡೆಯರ್ ಇವರಿಗೆ ವಹಿಸಿಕೊಟ್ಟಿದ್ದು, ಸದರಿಯವರು ಈ ಕೇಸಿನ ಕಡತವನ್ನು ಚಾಸಾ.29 ರವರಿಂದ ಪಡೆದುಕೊಂಡು ಚಾಸಾ.2 - ಯೋಗೇಶ್ವರ ಇವರ ಮರುಹೇಳಿಕೆಯನ್ನು ಪಡೆದುಕೊಂಡು, ಅದೇ ದಿವಸ ಚಾಸಾ.10 - ಪ್ರಸನ್ನ ಇವರ ಹೇಳಿಕೆಯನ್ನು ಪಡೆದುಕೊಂಡಿದ್ದು, ಪಿಡಬ್ಲ್ಯೂಡಿ ಇಲಾಖೆ ಇವರಿಗೆ ಪತ್ರ ಬರೆದು ನಕ್ಷೆಯನ್ನೂ ಸಹಿತ ಪಡೆದುಕೊಂಡಿದ್ದು, ಮುಂದಿನ ತನಿಖೆಯನ್ನು ಪ್ರಾಸಾ.10 ಇವರಿಗೆ ವಹಿಸಿಕೊಟ್ಟಿರುತ್ತಾರೆ. ಪ್ರಾಸಾ.10/ಚಾಸಾ.23 - ಸೈಯದ್ ನಿಜಾಮುದ್ದೀನ್ ಡಿವೈಎಸ್ಪಿ ಇವರು ಈ ಕೇಸಿನ ಕಡತವನ್ನು ಚಾಸಾ.32 ರವರಿಂದ ಪಡೆದುಕೊಂಡು ಚಾಸಾ.13, ಚಾಸಾ.5, ಚಾಸಾ.7, ಚಾಸಾ.14 ಇವರ ಹೇಳಿಕೆ ಹಾಗೂ ಚಾಸಾ.1 ರವರ ಮರುಹೇಳಿಕೆಯನ್ನೂ ಸಹಿತ ಪಡೆದುಕೊಂಡಿರುತ್ತಾರೆ. ನಿಶಾನೆ ಪಿ.41 - ದಾಖಲೆಗಳನ್ನೂ ಸಹಿತ ಪಡೆದುಕೊಂಡು ವರ್ಗಾವಣೆಯಾಗಿದ್ದರಿಂದ ಮುಂದಿನ ತನಿಖೆಯನ್ನು ಚಾಸಾ.24 ಇವರಿಗೆ ವಹಿಸಿಕೊಟ್ಟಿದ್ದು, ನಂತರ ಚಾಸಾ.24/ಪ್ರಾಸಾ.14 - ಆರ್.ಪಿ.ಅನಿಲ್ ಇವರು ಈ ಕೇಸಿನ ಕಡತವನ್ನು ಚಾಸಾ.23 ರಿಂದ ಪಡೆದುಕೊಂಡು, ಡಿ.ಐ.ಜಿ. ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರಿಂದ ಅಭಿಯೋಜನಾ ಮಂಜೂರಾತಿಯನ್ನು ಪಡೆದುಕೊಂಡು ತನಿಖೆ ಪೂರ್ತಿಗೊಂಡಿದ್ದರಿಂದ ಆರೋಪಿತರ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ.

5. ನಂತರ ನ್ಯಾಯಾಲಯವು ದೋಷಾರೋಪಣಾ ಪಟ್ಟಿಯನ್ನು ಪರಿಶೀಲಿಸಿ ಸಂಜ್ಞೆ ಪಡೆದುಕೊಂಡು ಆರೋಪಿತರ ವಿರುದ್ಧ ಸ್ಪೆಷಲ್ ಮೊಕದ್ದಮೆ ಸಂಖ್ಯೆ 48/2014 ಕೇಸು ದಾಖಲು ಮಾಡಿದ್ದು, ಆರೋಪಿತರು ಜಾಮೀನು ಪಡೆದುಕೊಂಡಿರುವುದರಿಂದ ಆರೋಪಿತರಿಗೆ ಸಮನ್ಸ್ ಕಳುಹಿಸಲಾಗಿ, ಆರೋಪಿತರು ತಮ್ಮ ವಕೀಲರ ಮುಖಾಂತರ ನ್ಯಾಯಾಲಯಕ್ಕೆ ಹಾಜರಾಗಿರುತ್ತಾರೆ.

6. ನಂತರ ನಮ್ಮ ಪೂರ್ವ ನ್ಯಾಯಾಧೀಶರು ದೋಷಾರೋಪಣಾ ಪಟ್ಟಿಯನ್ನು ಪರಿಶೀಲಿಸಿ, ದೋಷಾರೋಪಣೆ ರಚನೆ ಮಾಡಲು ಸಾಕಷ್ಟು ಕಾರಣಗಳಿದ್ದು, ದೋಷಾರೋಪಣೆ ರಚನೆ ಮಾಡಿ, ಓದಿ ಹೇಳಿದಾಗ ಆರೋಪಿತರು ಎಲ್ಲಾ ವಿಷಯಗಳನ್ನು ತಿಳಿದುಕೊಂಡು ತಾವು ಯಾವುದೇ ತಪ್ಪು ಮಾಡಿರುವುದಿಲ್ಲ ವಿಚಾರಣೆ ಆಗಬೇಕು ಅಂತಾ ನ್ಯಾಯಾಲಯಕ್ಕೆ ತಿಳಿಸಿರುತ್ತಾರೆ.

7. ನಂತರ ಅಭಿಯೋಜಕ ಪಕ್ಷವು ಆರೋಪಿತರ ಮೇಲಿರುವ ಆಪಾದನೆಯನ್ನು ರುಜುವಾತುಪಡಿಸಲು ಪ್ರಾಸಾ.1 ರಿಂದ ಪ್ರಾಸಾ.14 ಸಾಕ್ಷಿಗಳನ್ನು ವಿಚಾರಣೆ ಮಾಡಿ, ನಿಶಾನೆ ಪಿ.1 ರಿಂದ ಪಿ.51 ದಾಖಲೆಗಳನ್ನು ಮತ್ತು ಎಂ.ಓ.1 ರಿಂದ ಎಂ.ಓ.9 ನ್ನು ಗುರುತಿಸಿಕೊಂಡಿರುತ್ತಾರೆ.

8. ಅಭಿಯೋಜಕ ಸಾಕ್ಷಿ ಮುಗಿದ ನಂತರ ಆರೋಪಿತರಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರ ಅಡಿಯಲ್ಲಿ ಹೇಳಿಕೆಯನ್ನು ಓದಿ ಹೇಳಲಾಗಿ ಆರೋಪಿತರು ಸದರಿ ಹೇಳಿಕೆಯಲ್ಲಿ ಇರತಕ್ಕಂತಹ ಎಲ್ಲಾ ವಿಷಯಗಳನ್ನು ಸ್ಪಷ್ಟವಾಗಿ ಅಲ್ಲಗಳೆದಿರುತ್ತಾರೆ.

ಮಾನ್ಯ ನ್ಯಾಯಾಲಯಕ್ಕೆ ಹೇಳುವುದು ಏನಾದರು ಇದೆಯಾ ಅಂತಾ ಕೇಳಿದ ಪ್ರಶ್ನೆಗೆ 1 ನೇ ಆರೋಪಿ ಈ ಕೇಸಿಗೂ ನನಗೂ ಸಂಬಂಧವಿಲ್ಲ. ಸುಳ್ಳು ಕೇಸು ಮಾಡಿರುತ್ತಾರೆ, ಬ್ರಾಂಚ್ ಬೇರೆ ಇರುತ್ತದೆ ಅಂತಾ ಉತ್ತರಿಸಿರುತ್ತಾರೆ. 2 ನೇ ಆರೋಪಿ ನನಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ, ಆ ಸಂದರ್ಭದಲ್ಲಿ ನಾನು ಮಾಗಡಿಯಲ್ಲಿ ನಿಯೋಜನೆ ಮೇರೆಗೆ ಕೆಲಸ ಮಾಡುತ್ತಿದ್ದೆ, ಈ ಪ್ರಕರಣದ ಕೆಲಸಕ್ಕೂ ಮಾಗಡಿಯಲ್ಲಿ ಕೆಲಸ ಮಾಡುವ ಕೆಲಸಕ್ಕೂ ಯಾವುದೇ ಸಂಬಂಧವಿಲ್ಲ ಅಂತಾ ಉತ್ತರಿಸಿರುತ್ತಾರೆ. ತಮ್ಮ ಪರವಾಗಿ ಸಾಕ್ಷಿ ಇಲ್ಲ ಅಂತಾ ನ್ಯಾಯಾಲಯಕ್ಕೆ ತಿಳಿಸಿರುತ್ತಾರೆ.

9. ಉಭಯ ವಕೀಲರ ವಾದ ಕೇಳಲಾಯಿತು.

10. ಉಭಯ ವಕೀಲರ ವಾದ ವಿವಾದವನ್ನು ಪರಿಶೀಲಿಸಲಾಗಿ, ನ್ಯಾಯಾಲಯಕ್ಕೆ ಈ ಕೆಳಕಂಡಂತಹ ಅಂಶಗಳು ಚರ್ಚೆಗೆ ಬಂದಿರುತ್ತವೆ.

1. ಅಭಿಯೋಜಕ ಪಕ್ಷವು ಯುಕ್ತ ಸಂಶಯಗಳಿಂದಾಚೆ ದಿನಾಂಕ 19.04.1982 ರಂದು ರಾಮನಗರ ತಾಲ್ಲೂಕು, ಕೈಲಾಂಚ ಹೋಬಳಿ, ಅಚ್ಚಲು ಗ್ರಾಮದ ಸರ್ವೆ ನಂ.17 - 1 ಎಕರೆ 22 ಗುಂಟೆಯನ್ನು ಭೂ ನ್ಯಾಯ ಮಂಡಳಿಯಿಂದ ಪಿರ್ಯಾದಿಯ ತಾತನಿಗೆ ಮಂಜೂರಾಗಿದ್ದು, ನಂತರ ಸದರಿ ಪಿರ್ಯಾದಿಯ ತಾತ ಮರಣ ಹೊಂದಿದ್ದರಿಂದ ಅವರ ತಂದೆ ಜಯರಾಮ್ ಇವರ ಹೆಸರಿನಲ್ಲಿ ಖಾತೆ ಬದಲಾವಣೆ ಮಾಡಬೇಕಾಗಿದ್ದು ದಿನಾಂಕ 16-09-2009 ರಂದು ತಾಲ್ಲೂಕು ಕಚೇರಿ, ರಾಮನಗರದಲ್ಲಿ ಖಾತೆ ಬದಲಾವಣೆಗೆ ಅರ್ಜಿ ಸಲ್ಲಿಸಿದಾಗ ಖಾತೆ ಬದಲಾವಣೆ ಮಾಡಿಕೊಟ್ಟಿರುವುದಿಲ್ಲ. ನಂತರ 1 ನೇ ಆರೋಪಿ - ಹರ್ಷ ಮತ್ತು 2 ನೇ ಆರೋಪಿ - ಮೋಹನ್ ಎಂಬವವರು ಕರೆದು ನಿನ್ನ ಕೆಲಸ ಅಷ್ಟು ಸುಲಭವಾಗಿ ಆಗುವುದಿಲ್ಲ, ನೀನು ಹಣವನ್ನು ಕೊಟ್ಟರೆ ಮಾತ್ರ ಕೆಲಸ ಆಗುತ್ತದೆ ಅಂತಾ ಹೇಳಿ

ರೂ.60,000/- ಹಣವನ್ನು ಕೊಡಬೇಕು ಅಂತಾ ಕೇಳಿ ನಂತರ ಅಂತಿಮವಾಗಿ ರೂ.25,000/- ಹಣವನ್ನಾದರೂ ತಂದು ಕೊಡಬೇಕು ಅಂತಾ ಹೇಳಿದ್ದು, ನಂತರ ದಿನಾಂಕ 06.08.2010 ರಂದು ಮಧ್ಯಾಹ್ನ 2.35 ಗಂಟೆ ಸಮಯದಲ್ಲಿ ರಾಮನಗರದ ಶಾನ್ ಥಿಯೇಟರ್ ಕಾಂಪೌಂಡ್ ಬಳಿ 2 ನೇ ಆರೋಪಿ ಪಿರ್ಯಾದಿಯಿಂದ ಆರೋಪಿ ರೂ.25,000/- ಹಣವನ್ನು ಪಡೆದುಕೊಂಡಿರುತ್ತಾರೆ ಅಂತಾ ಭ್ರಷ್ಟಾಚಾರ ಕಾಯಿದೆ ಕಾನೂನು ಕಲಂ.7 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಮಾಡಿರುತ್ತಾರೆ ಅಂತ ಅಭಿಯೋಜಕ ಪಕ್ಷವು ನಿಸ್ಸಂಶಯವಾಗಿ ರುಜುವಾತುಪಡಿಸಿರುತ್ತಾರೆಯೇ ?

2. ಅಭಿಯೋಜಕ ಪಕ್ಷವು ಯುಕ್ತ ಸಂಶಯಗಳಿಂದಾಚೆ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ಮತ್ತು 2 ನೇ ಆರೋಪಿತರು ರಾಮನಗರದ ತಾಲ್ಲೂಕು ಕಚೇರಿಯಲ್ಲಿ ಆರೋಪಿತರು ಸರ್ಕಾರಿ ಸೇವಕರಾಗಿ, ಕಾನೂನು ಬದ್ಧ ಸಂಭಾವನೆಯನ್ನು ಹೊರತುಪಡಿಸಿ ಹಾಗೂ ತಮ್ಮ ಅಧಿಕೃತ ಸ್ಥಾನವನ್ನು ದುರುಪಯೋಗಪಡಿಸಿಕೊಂಡು ಮತ್ತು ಸಾರ್ವಜನಿಕ ಸೇವಕರಾಗಿ ಭ್ರಷ್ಟ ಮತ್ತು ಕಾನೂನು ಬಾಹಿರ ವಿಧಾನಗಳನ್ನು ಅಭ್ಯಾಸ ಮಾಡುವ ಮೂಲಕ ಯಾವುದೇ ಸಾರ್ವಜನಿಕ ಹಿತಾಸಕ್ತಿಯಿಲ್ಲದೇ ಪಿರ್ಯಾದಿಯಿಂದ ರೂ.25,000/- ಹಣವನ್ನು ಕಾನೂನು ಬಾಹಿರ ಪ್ರತಿಫಲ ಪಡೆದಿದ್ದಾರೆ ಅಂತ ಭ್ರಷ್ಟಾಚಾರ ಕಾಯಿದೆ, 1988 ಕಾನೂನು ಕಲಂ.13(1)(ಡಿ) ಸಹಕಲಂ.13(2)ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಮಾಡಿರುತ್ತಾರೆ ಅಂತ ಅಭಿಯೋಜಕ ಪಕ್ಷವು ನಿಸ್ಸಂಶಯವಾಗಿ ರುಜುವಾತುಪಡಿಸಿರುತ್ತಾರೆಯೇ ?

3. ಯಾವ ಆದೇಶ ?

11. ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

| | |
|---|---|
| ಅಂಶ ಸಂಖ್ಯೆ 1 : | ನಕಾರಾತ್ಮಕವಾಗಿ |
| ಅಂಶ ಸಂಖ್ಯೆ 2 : | ನಕಾರಾತ್ಮಕವಾಗಿ |
| ಅಂಶ ಸಂಖ್ಯೆ 3 : | ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ: |

## :: ಕಾರಣಗಳು ::

12. <u>ಅಂಶ ಸಂಖ್ಯೆ **1:**</u> ನ್ಯಾಯಾಲಯದ ಅನುಕೂಲಕ್ಕೋಸ್ಕರವಾಗಿ ಈ ಅಂಶಗಳನ್ನು ಏಕಕಾಲಕ್ಕೆ ತೆಗೆದುಕೊಳ್ಳಲಾಗಿದೆ.

13. <u>ಭ್ರಷ್ಟಚಾರ ಕಾನೂನು ಕಲಂ**.7, 13(1)**(ಡಿ) ಸಹಕಲಂ**.13(2)**ರಲ್ಲಿ ಅಪರಾಧ ಆಗಬೇಕಾಗಿದ್ದಲ್ಲಿ ಅಭಿಯೋಜಕ ಪಕ್ಷವು ಈ ಕೆಳಕಂಡ ಅಂಶಗಳನ್ನು ರುಜುವಾತುಪಡಿಸತಕ್ಕದ್ದು:</u>

ಎ. ಆರೋಪಿ ಸರ್ಕಾರಿ ನೌಕರನಾಗಿದ್ದು, ಬೇರೆ ಯಾವುದೇ ವ್ಯಕ್ತಿಯಿಂದ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ ಅಂತಾ,

ಬಿ. ಆರೋಪಿ ಯಾವುದೇ ಒಬ್ಬ ವ್ಯಕ್ತಿಗೆ ಲಂಚದ ಹಣವನ್ನು ರೂಢಿಗತ ಮಾಡಿಕೊಂಡು, ಆ ಹಣವನ್ನು ಅಂಗೀಕರಿಸಿರುತ್ತಾರೆ ಎಂಬುದರ ಬಗ್ಗೆ,

ಸಿ. ಟ್ರಾಪ್ ಮಾಡುವ ಸಮಯದಲ್ಲಿ ಕೆಲಸ ಬಾಕಿ ಇತ್ತು ಎಂಬುದರ ಬಗ್ಗೆ, ಈ ಅಂಶಗಳನ್ನು ರುಜುವಾತುಪಡಿಸಬೇಕಾಗುತ್ತದೆ.

14. <u>ದೂರು ಕೊಡುವ ಸಮಯದಲ್ಲಿ ಪಿರ್ಯಾದಿಯ ಕೆಲಸ ಬಾಕಿ ಇತ್ತೋ ಅಥವಾ ಇಲ್ಲವೋ ಎಂಬುದರ ಬಗ್ಗೆ:</u> ಪ್ರಾಸಾ.1/ಚಾಸಾ.1 - ಪಿರ್ಯಾದಿದಾರರು ತನ್ನ ತಾತನ ಹೆಸರಿನಲ್ಲಿರುವ ಜಮೀನನ್ನು ತನ್ನ ತಾತ ಮೃತಪಟ್ಟ ನಂತರ ತನ್ನ ತಂದೆಯ ಹೆಸರಿನಲ್ಲಿ ಖಾತೆ ಬದಲಾವಣೆ ಮಾಡುವ ಸಲುವಾಗಿ ತಹಶೀಲ್ದಾರ್ ಬಳಿ ಅರ್ಜಿ ಕೊಟ್ಟಿದ್ದು, ಸದರಿ ಖಾತೆ ಬದಲಾವಣೆ ಮಾಡಲು ಆರೋಪಿತರು ಲಂಚಕ್ಕೆ ಬೇಡಿಕೆ ಇಟ್ಟಿದ್ದಾರೆ ಅಂತಾ ದಿನಾಂಕ 06.08.2010 ರಂದು ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿರುತ್ತಾರೆ. ನಿಶಾನೆ ಪಿ.35 ರಾಮನಗರ ತಹಶೀಲ್ದಾರ್ ರವರು ಪೊಲೀಸ್ ನಿರೀಕ್ಷಕರು, ಕರ್ನಾಟಕ

ಲೋಕಾಯುಕ್ತ ಇವರಿಗೆ ದಿನಾಂಕ 18.06.2011 ರಂದು ಪತ್ರ ಬರೆದಿದ್ದು, ಸದರಿ ಪತ್ರದಲ್ಲಿ ರಾಮನಗರ ತಾಲ್ಲೂಕು, ಕೈಲಾಂಚ ಹೋಬಳಿ, ಅಚ್ಚಲು ಗ್ರಾಮದ ಸರ್ವೆ ನಂ.17 ರಲ್ಲಿ 1 ಎಕರೆ 24 ಗುಂಟೆಗೆ ಖಾತೆ ಬದಲಾವಣೆಗೆ ಸಂಬಂಧಪಟ್ಟಂತೆ ಮಾಹಿತಿ ನೀಡಿದ್ದು, ಸದರಿ ಮಾಹಿತಿಯಲ್ಲಿ ದಿನಾಂಕ 06.08.2010 ರಂದು ಸದರಿ ಅರ್ಜಿಯು ಯಾವ ಹಂತದಲ್ಲಿತ್ತು ಹಾಗೂ ಯಾವ ಅಧಿಕಾರಿಯ ಬಳಿ ಇರುತ್ತದೆ ಎಂಬುದರ ಬಗ್ಗೆ ಮಾಹಿತಿ ಕೇಳಿದ್ದು, ಅದಕ್ಕೆ ಉತ್ತರ - ಅರ್ಜಿದಾರ ದಿನಾಂಕ 01.09.2009 ರಂದು ತಾಲ್ಲೂಕು ಕಚೇರಿಗೆ ಅರ್ಜಿ ಸಲ್ಲಿಸಿದ್ದು, ತಹಶೀಲ್ದಾರ್ ಇವರ ಆದೇಶದಂತೆ ರಾಜಸ್ವ ನಿರೀಕ್ಷಕರು ದಿನಾಂಕ 19-01-2010 ರಂದು ಮ್ಯುಟೇಷನ್ ಅನ್ನು ತಿರಸ್ಕರಿಸಿರುತ್ತಾರೆ. ನಂತರ ಅಭಿಲೇಖಾಲಯಕ್ಕೆ ಕಡತವನ್ನು ರವಾನಿಸಲಾಗಿರುತ್ತದೆ. ಎಂ.ಆರ್.9/2009-10 ರ ಅರ್ಜಿದಾರ ತಿರಸ್ಕೃತ ಎಂ.ಆರ್.ನ್ನು ಪ್ರಸ್ತುತ ಎ.ಸಿ.ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ್ದು, ದಿನಾಂಕ 24.08.2010 ರಂದು ಅರ್ಜಿದಾರ ಮನವಿಯನ್ನು ಸಲ್ಲಿಸಿರುತ್ತಾರೆ ಹಾಗೂ ಎ.ಸಿ.ಯವರ ಆದೇಶದ ಪ್ರಕಾರ ಎಂ.ಆರ್.12/2010-11 ರಂತೆ ರದ್ದತಿಯಾಗಿ ಆ ಪ್ರಕಾರ ಗಂಗಯ್ಯನವರ ಹೆಸರಿಗೆ ದಿನಾಂಕ 08.09.2010 ರಂದು ಖಾತೆ ಬದಲಾವಣೆ ಆಗಿರುತ್ತದೆ. ಆ ಪ್ರಯುಕ್ತ ದಿನಾಂಕ 06.08.2010 ರಂದು ಈ ಕಚೇರಿಯಲ್ಲಿ ಪ್ರಕರಣದ ಸಂಬಂಧ ಯಾವ ವಹಿವಾಟು ವ್ಯವಹಾರ ನಡೆದಿರುವುದಿಲ್ಲ ಅಂತಾ ಸ್ಪಷ್ಟವಾಗಿ ಉತ್ತರ ನೀಡಿರುತ್ತಾರೆ. ಈ ದಾಖಲೆಯಲ್ಲಿರತಕ್ಕಂಥ ಅಂಶವನ್ನು ಪರಿಶೀಲಿಸಲಾಗಿ, ಪಿರ್ಯಾದಿದಾರ ಈ ಮೊದಲು ಖಾತೆ ಬದಲಾವಣೆ ಮಾಡಲು ದಿನಾಂಕ 10-09-2009 ರಂದು ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿ ದಿನಾಂಕ 19-01-2010 ರಂದು

ತಿರಸ್ಕೃತವಾಗಿರುತ್ತದೆ. ಈ ವಿಷಯ ಪಿರ್ಯಾದಿಗೆ ಗೊತ್ತಿದ್ದು, ಎ.ಸಿ. ನ್ಯಾಯಾಲಯಕ್ಕೆ ಪುನಃ ಆದೇಶ ಪ್ರಶ್ನೆ ಮಾಡಿದ್ದರೂ ಸಹಿತ ದಿನಾಂಕ 06-08-2010 ರಂದು ಆರೋಪಿತರು ತನ್ನ ತಾತನ ಹೆಸರಿನಲ್ಲಿರುವ ಜಮೀನನ್ನು ಖಾತೆ ಬದಲಾವಣೆ ಮಾಡಲು ಲಂಚ ಕೇಳುತ್ತಿದ್ದಾರೆ ಅಂತಾ ದೂರು ಕೊಟ್ಟಿದ್ದು, ದೂರು ಕೊಡುವ ಸಮಯದಲ್ಲಿ ಪಿರ್ಯಾದಿಗೆ ಸಂಬಂಧಪಟ್ಟಂಥ ಯಾವುದೇ ವಹಿವಾಟು ಇರುವುದಿಲ್ಲ ಎಂಬುದರ ಬಗ್ಗೆ ಸದರಿ ಆದೇಶದಿಂದ ಸ್ಪಷ್ಟವಾಗಿ ಕಂಡು ಬಂದಿರುತ್ತದೆ.

15. ಅದೇ ಪ್ರಕಾರ ನಿಶಾನೆ ಪಿ.36 ಕಂದಾಯ ಅಧಿಕಾರಿಗಳು ಇರತಕ್ಕಂಥ ಕಡತ ಪರಿಶೀಲಿಸಲಾಗಿ, ಎಂ.ಆರ್.9/2009-10 ಸರ್ವೆ ನಂ.17 ರ್ ಇನಾಮ್ ಜಮೀನು ಆಗಿರುವುದರಿಂದ ಸದರಿ ಜಮೀನಿನ ಮಂಜೂರಾತಿ ಬಗ್ಗೆ ನಮೂನೆ-10 ನ್ನು ಹಾಜರುಪಡಿಸಿಲ್ಲದ ಪ್ರಯುಕ್ತ ಖಾತೆಯನ್ನು ತಿರಸ್ಕರಿಸತಕ್ಕದ್ದು ಅಂತಾ ಗ್ರಾಮಲೆಕ್ಕಾಧಿಕಾರಿ ದಿನಾಂಕ 20-01-2010 ರಂದು ಹಿಂಬರಹ ಮಾಡಿ ಸಹಿ ಮಾಡಿರುತ್ತಾರೆ. ಸದರಿ ಗ್ರಾಮ ಲೆಕ್ಕಾಧಿಕಾರಿರವರು ದಿನಾಂಕ 20-01-2010 ರಂದು ಆದೇಶ ಮಾಡಿದ್ದನ್ನು ರಾಜಸ್ವ ನಿರೀಕ್ಷಕರು ನಮೂನೆ - 10 ನ್ನು ಹಾಜರುಪಡಿಸದ ಕಾರಣ ವಹಿವಾಟನ್ನು ತಿರಸ್ಕರಿಸಿದೆ ಅಂತಾ ದಿನಾಂಕ 19.01.2010 ರಂದು ರುಜು ಮಾಡಿರುತ್ತಾರೆ. ಈ ಅಂಶ ಪರಿಶೀಲಿಸಲಾಗಿ, ಗ್ರಾಮ ಲೆಕ್ಕಾಧಿಕಾರಿಯವರು ದಿನಾಂಕ 20-01-2010 ರಂದು ರುಜು ಮಾಡಿದ್ದು ಅವರು ರುಜು ಮಾಡಿದ ನಂತರ ರಾಜಸ್ವ ನಿರೀಕ್ಷಕರು ದಿನಾಂಕ 21 ಕ್ಕೆ ರುಜು ಮಾಡಬೇಕಾಗಿತ್ತು. ಆದರೆ, ದಿನಾಂಕ 19.01.2010 ರಂದು ರುಜು ಮಾಡಿರುವುದರಿಂದ, ಗ್ರಾಮ ಲೆಕ್ಕಾಧಿಕಾರಿಯವರ ಆದೇಶಕ್ಕಿಂತ ಪೂರ್ವದಲ್ಲಿ ರಾಜಸ್ವ

ನಿರೀಕ್ಷಕರ ಆದೇಶವಾಗಿದ್ದು, ನಂತರ ಗ್ರಾಮ ಲೆಕ್ಕಾಧಿಕಾರಿಯವರು ಸಹಿ ಮಾಡಿದ್ದರ ಬಗ್ಗೆ ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ಆದ್ದರಿಂದ ಈ ದಾಖಲೆಗಳ ಪ್ರಕಾರ ದೂರು ಕೊಡುವ ಸಮಯದಲ್ಲಿ ಪಿರ್ಯಾದಿಯ ಖಾತೆ ಬದಲಾವಣೆ ಮಾಡತಕ್ಕಂಥ ವಹಿವಾಟು ತಹಶೀಲ್ದಾರ್ ಇವರ ಬಳಿ ಇರುವುದಿಲ್ಲ ಎಂಬುದರ ಬಗ್ಗೆ ಸ್ಪಷ್ಟವಾಗಿ ಕಂಡು ಬಂದಿರುವುದರಿಂದ ಆರೋಪಿತರು ಪಿರ್ಯಾದಿಯ ಜಮೀನಿನ ಖಾತೆ ಬದಲಾವಣೆ ಮಾಡಲು ಲಂಚ ಕೇಳತಕ್ಕಂಥ ಸಂದರ್ಭ ಉದ್ಭವವಾಗಲಾರದು.

16. ಸದರಿ ದಾಖಲೆಗೆ ಪೂರಕವಾಗಿ ಪ್ರಾಸಾ.11/ಚಾಸಾ.9 - ಡಾ.ನಟೇಶ್.ಡಿ.ಬಿ., ರಾಮನಗರ ತಹಶೀಲ್ದಾರ್ ಇವರು ಮಾನ್ಯ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಿದ್ದು, ಡಿವೈಎಸ್ಪಿ, ಕರ್ನಾಟಕ ಲೋಕಾಯುಕ್ತ ಇವರು ಆರೋಪಿತರ ಸೇವಾ ವಿವರಗಳ ಸಂಬಂಧಪಟ್ಟಂತೆ ಮಾಹಿತಿಯನ್ನು ಕೇಳಿದ್ದು, ಆ ಪ್ರಕಾರ ಮುಖ್ಯ ವಿಚಾರಣೆಯಲ್ಲಿ 1 ನೇ ಆರೋಪಿ ನಮ್ಮ ಕಚೇರಿಯಲ್ಲಿ ದ್ವಿತೀಯ ದರ್ಜೆ ಸಹಾಯಕನಾಗಿ, 2 ನೇ ಆರೋಪಿ ನಮ್ಮ ಕಚೇರಿಯಲ್ಲಿ ಭೂಮಿ ಶಾಖೆಯಲ್ಲಿ ಗ್ರಾಮ ಲೆಕ್ಕಾಧಿಕಾರಿ ಕಂಪ್ಯೂಟರ್ ಕೆಲಸ ಮಾಡುತ್ತಿದ್ದರು ಅಂತಾ ಸಾಕ್ಷಿ ನುಡಿದಿದ್ದು ಹಾಗೂ ಈ ಮೊದಲು ಪಿರ್ಯಾದಿ ಕಳುಹಿಸಿದಂತಹ ಮಂಜೂರಾತಿ ದಾಖಲೆ ಪರಿಶೀಲನೆ ಮಾಡಬೇಕೆಂದು ಷರಾ ಬರೆದು ತಿರಸ್ಕರಿಸಿದೆ ಅಂತಾ ಸಾಕ್ಷಿ ನುಡಿದಿರುತ್ತಾರೆ. ಈ ಸಾಕ್ಷಿ ತನ್ನ ಪಾಟೀ ಸವಾಲಿನಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದ ಮೂಲ ದಾಖಲಾತಿಗಳನ್ನು ಅರ್ಜಿದಾರರು ಲಗತ್ತಿಸಿರಲಿಲ್ಲ ಎಂದರೆ ಸರಿ. ಖಾತೆ ವರ್ಗಾವಣೆ ತಿರಸ್ಕರಿಸಿದ ನಂತರ ಮೂಲ ದಾಖಲಾತಿಗಳು ಅರ್ಜಿದಾರರು ಹಾಜರುಪಡಿಸಿದರೆ ಅರ್ಜಿಯನ್ನು ಪುನಃ ಪರಿಶೀಲಿಸಲು ಅವಕಾಶ ಇರುತ್ತದೆ.

ನನ್ನ ಮುಂದೆ ಅರ್ಜಿದಾರರು ಮೂಲ ಮಂಜೂರಾತಿ, ವಂಶವೃಕ್ಷ ಹಾಜರುಪಡಿಸಿಲ್ಲ ಎಂದರೆ ಸರಿ. ಟ್ರಾಪ್ ಪ್ರಕ್ರಿಯೆ ಮುಗಿದ ಮೇಲೆ ಒಂದು ವಾರ ಕಳೆದ ಮೇಲೆ ನಾವು ಕೆಳಕಂಡ ದಾಖಲೆಗಳನ್ನು ವರ್ಗಾವಣೆ ಮಾಡುತ್ತೇವೆ ಎಂದರೆ ಸರಿ. 1 ನೇ ಆರೋಪಿ - ಹರ್ಷ ಈತನು ಮಾಡುತ್ತಿದ್ದ ಬ್ರಾಂಚಗೆ ಖಾತೆ ವರ್ಗಾವಣೆ ಮಾಡುವ ವಿಷಯ ಬರುವುದಿಲ್ಲ ಮತ್ತು ಅವರಿಗೆ ಸಂಬಂಧಿಸಿದ ವಿಷಯವಲ್ಲ. 2 ನೇ ಆರೋಪಿ ಅಪರೇಟರ್ ಅಂತಾ ಕೆಲಸ ಮಾಡುತ್ತಿದ್ದು, ಭೂಮಿ ತಂತ್ರದಲ್ಲಿ ಅಪ್ಲೋಡ್ ಮಾಡುವುದು ಆತನ ಕೆಲಸ. ಅದನ್ನು ಹೊರತುಪಡಿಸಿ ಬೇರೆ ಯಾವುದೇ ಕೆಲಸ ಇರಲಿಲ್ಲ. ಈ ಅಂಶವನ್ನು ಪರಿಶೀಲಿಸಲಾಗಿ, 1 ಮತ್ತು 2 ನೇ ಆರೋಪಪಿತರಿಗೆ ಖಾತೆ ಬದಲಾವಣೆ ಮಾಡುವ ಕೆಲಸ ಇರುವುದಿಲ್ಲ ಅಂತಾ ಒಪ್ಪಿಕೊಂಡಿರುವುದರಿಂದ ಪೌತಿ ಖಾತೆ ಆಧಾರದ ಮೇಲೆ ಪಿರ್ಯಾದಿಯ ಖಾತೆಯನ್ನು ಬದಲಾವಣೆ ಮಾಡತಕ್ಕಂಥ, ಆ ವಿಷಯಕ್ಕೆ ಸಂಬಂಧಪಟ್ಟಂತೆ ಆರೋಪಿತರು ಪಿರ್ಯಾದಿ ಕಡೆಯಿಂದ ಲಂಚ ಕೇಳತಕ್ಕಂಥ ಸಂದರ್ಭ ಉದ್ಭವಾಗಲಾರದು.

17. ಪ್ರಾಸಾ.6/ಚಾಸಾ.8 - ರವಿ ಎಂ.ತಿರ್ಲಾಪುರ್ ರಾಮನಗರ ತಾಲ್ಲೂಕಿನ ತಹಶೀಲ್ದಾರ್ ಆಗಿದ್ದು, ಲೋಕಾಯುಕ್ತ ಪೊಲೀಸರು ಅಚ್ಚಲ ಗ್ರಾಮ, ಕೈಲಾಂಚ ಹೋಬಳಿ ಜಯರಾಮ್ ಎಂಬುವವರ ಜಮೀನಿನ ಖಾತೆಗೆ ಸಂಬಂಧಪಟ್ಟಂತೆ ದಾಖಲಾತಿಯನ್ನು ಕೇಳಿದ್ದು, ಆ ಪ್ರಕಾರ ನಾನು ನಿಶಾನೆ ಪಿ.35 ಮತ್ತು ಪಿ.36 ದಾಖಲೆಗಳನ್ನು ಕೊಟ್ಟಿದ್ದು, ಅವು ಪುಟ 57 ರಿಂದ 71 ಇರುತ್ತವೆ ಅಂತಾ ಈ ಸಾಕ್ಷಿ ತಮ್ಮ ಪಾಟೀ ಸವಾಲಿನಲ್ಲಿ ಅಚ್ಚಲು ಗ್ರಾಮಕ್ಕೆ ಸಂಬಂಧಪಟ್ಟಂತಹ ಆರ್.ಐ ಮತ್ತು ಗ್ರಾಮ ಲೆಕ್ಕಾಧಿಕಾರಿ ಯಾರೂ ಇದ್ದರು ಅನ್ನುವುದು ನನಗೆ ಗೊತ್ತಿಲ್ಲ. ನಿಶಾನೆ ಪಿ.36 ರಲ್ಲಿ

ತೋರಿಸಿದ ದಾಖಲೆಗಳು ರೆಕಾರ್ಡ್ ರೂಮಿನಲ್ಲಿ ಇದ್ದವು. ದಾಖಲಾತಿಯನ್ನು ಪರಿಶೀಲಿಸಿದಾಗ ಒಂದು ಸಲ ಖಾತೆ ರದ್ದಾಗಿತ್ತು, ನಂತರ ಎ.ಸಿ. ಇವರ ಆದೇಶದಂತೆ ಖಾತೆ ಬದಲಾವಣೆ ಆಗಿದೆ. ನಾನು ದಾಖಲಾತಿಗಳನ್ನು ಖುದ್ದಾಗಿ ಅಟೆಸ್ಟ್ ಮಾಡಿಲ್ಲ. ಆದರೆ, ಪರಿಶೀಲನೆ ಮಾಡಿದ್ದೇನೆ. ಈ ಅಂಶವನ್ನು ಪರಿಶೀಲಿಸಲಾಗಿ, ಖಾತೆ ಬದಲಾವಣೆ ಮಾಡತಕ್ಕಂಥ ಕಂದಾಯ ನಿರೀಕ್ಷಕರು ಯಾರು ಮತ್ತು ಗ್ರಾಮಲೆಕ್ಕಾಧಿಕಾರಿ ಯಾರು ಇರುತ್ತಾರೆ ಅಂತಾ ಒಬ್ಬ ತಹಶೀಲ್ದಾರ್ ಆಗಿ ನೆನಪಿಲ್ಲ ಅಂತಾ ಸಾಕ್ಷಿ ನುಡಿದಿರುವುದರಿಂದ ತಹಶೀಲ್ದಾರ್ ಇವರಿಗೆ ಯಾರು ಕಂದಾಯ ನಿರೀಕ್ಷಕರು, ಗ್ರಾಮ ಲೆಕ್ಕಾಧಿಕಾರಿ ಇರುತ್ತಾರೆ ಅಂತಾ ಸಂಪೂರ್ಣ ಮಾಹಿತಿ ಇದ್ದರೂ ಸಹಿತ ಆರೋಪಿತರು ಕಂದಾಯ ನಿರೀಕ್ಷಕರು ಅಲ್ಲ, ಗ್ರಾಮ ಲೆಕ್ಕಾಧಿಕಾರಿಗಳು ಇಲ್ಲದೇ ಇರುವುದರಿಂದ ಸಾಕ್ಷಿ ಜಾರಿಕೆ ಉತ್ತರ ನೀಡಿ, ನೆನಪಿಲ್ಲ ಅಂತ ಜಾರಿಕೆ ಉತ್ತರ ನೀಡಿರುತ್ತಾರೆ. ಆದ್ದರಿಂದ ಸದರಿ ಸಾಕ್ಷಿ ಮತ್ತು ದಾಖಲೆಗಳ ಮುಖಾಂತರ ನಿಶಾನೆ ಪಿ.1 - ದೂರು ಕೊಡುವ ಸಮಯದಲ್ಲಿ ಪಿರ್ಯಾದಿಗೆ ಸಂಬಂಧಪಟ್ಟಂಥ ಜಮೀನನ್ನು ತಾತನ ಹೆಸರನ್ನು ಕಡಿಮೆ ಮಾಡಿ ತಂದೆಯ ಹೆಸರಿನಲ್ಲಿ ಖಾತೆಯ ಬದಲಾವಣೆ ಮಾಡಲು ಕೆಲಸ ಬಾಕಿ ಇತ್ತು ಅಂತಾ ಅಭಿಯೋಜಕ ಪಕ್ಷವು ನಿಸ್ಸಂಶಯವಾಗಿ ರುಜುವಾತುಪಡಿಸಲು ವಿಫಲವಾಗಿರುತ್ತಾರೆ.

18. <u>ಆರೋಪಿತರ ಮೇಲೆ ಕೇಸನ್ನು ದಾಖಲು ಮಾಡಲು ಮಂಜೂರಾತಿ ಆದೇಶ ನೀಡಿದ್ದರ ಬಗ್ಗೆ:</u> ನಿಶಾನೆ ಪಿ.32 - ಜಿಲ್ಲಾಧಿಕಾರಿ, ರಾಮನಗರ ಇವರು ಆರೋಪಿತರ ಮೇಲೆ ಭ್ರಷ್ಟಾಚಾರ ತಡೆ ಕಾನೂನು ಕಲಂ.7, 13 ರ ಅಡಿಯಲ್ಲಿ ಕೇಸು ದಾಖಲಾಗಿದ್ದು, ಅವರ ಮೇಲೆ ಕೇಸನ್ನು ಮುಂದುವರೆಸುವ ಬಗ್ಗೆ ಮಂಜೂರಾತಿ ಆದೇಶ ನೀಡಿರುತ್ತಾರೆ.

ಸದರಿ ಮಂಜೂರಾತಿ ಆದೇಶವನ್ನು ನೀಡುವಾಗ ಸದರಿ ಅಧಿಕಾರಿಯು ಸಮರ್ಪಕವಾದ ದಾಖಲೆಗಳನ್ನು ಪರಿಶೀಲನೆ ಮಾಡದೆ ಆದೇಶ ಮಾಡಿರುತ್ತಾರೆ. ಇದಕ್ಕೆ ಸಂಬಂಧಪಟ್ಟಂತೆ ಪ್ರಾಸಾ.3/ಚಾಸಾ.4 - ಡಾಕ್ಟರ್ ಎಂ.ವಿ.ವೆಂಕಟೇಶ್, ರಾಮನಗರ ಜಿಲ್ಲಾಧಿಕಾರಿ ಇವರು ಉಪ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಇವರು ಪತ್ರ ಬರೆದು ಆರೋಪಿತರ ಮೇಲೆ ಕೇಸು ದಾಖಲಾಗಿದ್ದು, ಅಭಿಯೋಜನಾ ಮಂಜೂರಾತಿ ಬೇಕು ಅಂತಾ ಕೇಳಿದ್ದು, ದೂರು, ಪ್ರಥಮ ವರ್ತಮಾನ ವರದಿ, ಪ್ರಾಯೋಗಿಕ ಪಂಚನಾಮೆ, ಟ್ರಾಪ್ ಪಂಚನಾಮೆಯನ್ನು ಪರಿಶೀಲಿಸಿ ನಿಶಾನೆ ಪಿ.32 ಆದೇಶ ಕೊಟ್ಟಿದ್ದರ ಬಗ್ಗೆ ಮುಖ್ಯ ವಿಚಾರಣೆ ಸಾಕ್ಷಿ ನುಡಿದಿದ್ದು, ಈ ಸಾಕ್ಷಿ ತಮ್ಮ ಪಾಟೀ ಸವಾಲಿನಲ್ಲಿ ಕಂದಾಯ ಇಲಾಖೆಯಲ್ಲಿ ಖಾತೆಯ ಬದಲಾವಣೆ ಸಂಬಂಧಪಟ್ಟಂಥ ಕಡತ ನಿರ್ವಹಣೆ ಗುಮಾಸ್ತರಿರುತ್ತಾರೆ ಅಂದರೆ ಸರಿ. ಈ ಪ್ರಕರಣಕ್ಕೆ ಸಂಬಂಧಪಟ್ಟಂಥ ಕಡತ ನಿರ್ವಹಣೆ ಗುಮಾಸ್ತರು ಯಾರು ಇದ್ದರೆಂದು ನಾನು ತಿಳಿದುಕೊಂಡಿದ್ದೇನೆ. ಆದರೆ, ಈಗ ನೆನಪಿಲ್ಲ. 1 ನೇ ಆರೋಪಿ - ಹರ್ಷ, ಭೂಮಿ ಪರಿವರ್ತನಾ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, 2 ನೇ ಆರೋಪಿ - ಮೋಹನ್, ಮಾಗಡಿ ವಿಭಾಗದ ಗ್ರಾಮ ಲೆಕ್ಕಾಧಿಕಾರಿ ಆಗಿದ್ದರು ಅಂತಾ ಒಪ್ಪಿಕೊಂಡಿರುತ್ತಾರೆ. ಮಾಗಡಿ ವಿಭಾಗದ ಗ್ರಾಮ ಲೆಕ್ಕಾಧಿಕಾರಿ - 2 ನೇ ಆರೋಪಿ, 1 ನೇ ಆರೋಪಿ - ಭೂ ಪರಿವರ್ತನಾ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿದುದ್ದರಿಂದ ಸದರಿಯವರಿಬ್ಬರೂ ಕಂದಾಯ ನಿರೀಕ್ಷಕರು ಆಗಿರುವುದಿಲ್ಲ ಹಾಗೂ ರಾಮನಗರದ ಗ್ರಾಮ ಲೆಕ್ಕಾಧಿಕಾರಿಯೂ ಸಹಿತ ಆಗಿರುವುದಿಲ್ಲ ಅಂತಾ ಸ್ಪಷ್ಟವಾಗಿ ಸಾಕ್ಷಿಗೆ ಗೊತ್ತಿದ್ದರೂ ಸಹಿತ ಅಭಿಯೋಜಾನ ಮಂಜೂರಾತಿ ಆದೇಶವನ್ನು ಕೊಡುವುದಕ್ಕಿಂತ ಪೂರ್ವದಲ್ಲಿ

ಸಂಬಂಧಪಟ್ಟಂಥ ತಹಶೀಲ್ದಾರ್ ಅವರ ಕಡೆಯಿಂದ ಮಾಹಿತಿಯನ್ನು ಪಡೆದುಕೊಂಡು ದಾಖಲಾತಿಗಳನ್ನು ಪಡೆದುಕೊಂಡು ಸದರಿ ಖಾತೆ ಬದಲಾವಣೆ ಮಾಡತಕ್ಕಂಥ ಪಿರ್ಯಾದಿ ಸಂಬಂಧಪಟ್ಟಂಥ ದಾಖಲಾತಿಗಳನ್ನು ಪರಿಶೀಲನೆ ಮಾಡದೇ ತಾಂತ್ರಿಕವಾಗಿ ಮಂಜೂರಾತಿ ಆದೇಶ ನೀಡಿದ್ದು, ಈ ಒಂದು ಆದೇಶದಿಂದ ಆರೋಪಿತರ ಮೇಲೆ ಕೇಸು ದಾಖಲು ಮಾಡಿದ್ದು ನ್ಯಾಯ ಸಮ್ಮತವಾಗಿರುವುದಿಲ್ಲ.

19. <u>ನೆರಳು ಸಾಕ್ಷಿ ಅಥವಾ ಪಂಚ ಸಾಕ್ಷಿ **1** ಇವರ ಬಗ್ಗೆ:</u> ಪ್ರಾಸಾ.2/ಚಾಸಾ.2 - ಎಸ್.ಯೋಗೇಶ್, ಈ ಸಾಕ್ಷಿ ನೆರಳು ಸಾಕ್ಷಿಯಾಗಿದ್ದು, ಪ್ರಾಸಾ.1 - ಪಿರ್ಯಾದುದಾರರು ಆರೋಪಿತರು ಖಾತೆ ಬದಲಾವಣೆ ಮಾಡಲು ಲಂಚ ಕೇಳುತ್ತಿದ್ದಾರೆ ಅಂತಾ ಹೇಳಿ ಆರೋಪಿತರ ಜೊತೆ ಮಾತನಾಡಿದ್ದರ ಬಗ್ಗೆ ರೆಕಾರ್ಡ್ ಮಾಡಿಕೊಂಡು ನಂತರ ಟೇಪ್ ರೆಕಾರ್ಡರನ್ನು ಹಾಜರುಪಡಿಸಿ, ರೂ.25,000/-ನ್ನು ಕೊಟ್ಟು ದೂರು ಕೊಟ್ಟಿದ್ದು, ಆ ಸಮಯದಲ್ಲಿ ಈ ಸಾಕ್ಷಿಗೆ ಪರಿಚಯ ಮಾಡಿಕೊಟ್ಟಂಥ ಸಾಕ್ಷಿ ಆಗಿರುತ್ತಾರೆ. ಈ ಸಾಕ್ಷಿ ತನ್ನ ಮುಖ್ಯ ವಿಚಾರಣೆಯ ಪ್ಯಾರಾ 15 ರಲ್ಲಿ <u>ಪ್ರಾಯೋಗಿಕ ಪಂಚನಾಮೆಯಲ್ಲಿ ಪಿರ್ಯಾದಿ ಈ ಮೊದಲು ತನಿಖಾಧಿಕಾರಿಯವರು ಆತನಿಗೆ ವಹಿಸಿಕೊಟ್ಟಿದ್ದನ್ನು ಒಂದು ಟೇಪ್ ರೆಕಾರ್ಡರನ್ನು ಹಾಜರುಪಡಿಸಿದರು. ಆ ಟೇಪ್ ರೆಕಾರ್ಡರನ್ನು ನಮ್ಮ ಸಮಕ್ಷಮ ಆನ್ ಮಾಡಿ ನೋಡಿದಾಗ ಅದರಲ್ಲಿ ದಾಖಲಾಗಿದ್ದ ಸಂಭಾಷಣೆ ಸ್ಪಷ್ಟವಾಗಿರಲಿಲ್ಲ. ಅದನ್ನು ವಶಪಡಿಸಿಕೊಂಡಿಲ್ಲ ಅಂತಾ ಸಾಕ್ಷಿ ನುಡಿದಿರುತ್ತಾರೆ</u>. ಮುಖ್ಯ ವಿಚಾರಣಾ ಪ್ಯಾರಾ20 ರಲ್ಲಿ ಹಣ ಪಡದ ವ್ಯಕ್ತಿ ಮಾಗಡಿಯಲ್ಲಿ ನಿಯೋಜನೆಯ ಮೇರೆಗೆ ಮಾಗಡಿ ತಾಲ್ಲೂಕಿನ ಗ್ರಾಮಲೆಕ್ಕಾಧಿಕಾರಿಯಾಗಿದ್ದರು ಅಂತಾ ನಾನು ತಿಳಿದುಕೊಂಡಿರುತ್ತೇನೆ. ಕ್ರಿಕೆಟ್ ಆಟ

ಆಡಲು ಜಿಲ್ಲಾಧಿಕಾರಿ ಇವರ ಆದೇಶ ಮೇರೆಗೆ ರಾಮನಗರಕ್ಕೆ ಬಂದಿರುತ್ತಾರೆ ಅಂತಾ ತಿಳಿದುಕೊಂಡಿರುತ್ತೇನೆ. ಈ ಸಾಕ್ಷಿ ಪಾಟೀ ಸವಾಲು ಪ್ಯಾರಾ 40 ರಲ್ಲಿ ಪಿರ್ಯಾದಿಗೆ ಟೇಪ್ ರೆಕಾರ್ಡರನ್ನು ಯಾವಾಗ, ಯಾರು ಕೊಟ್ಟಿದ್ದರೆಂದು ನಾನು ವಿಚಾರಿಸಿಲ್ಲ ಹಾಗೂ 2 ನೇ ಆರೋಪಿ ಫೋನ್ ಮಾಡಿದಾಗ ಆತ ತಾನು ಶಾನ್ ಥಿಯೇಟರ್‌ನ ಬಳಿ ಸಿಗುವುದಾಗಿ ಅಂತಾ ತಿಳಿಸಿರುತ್ತಾರೆ ಅಂತಾ ಒಂದು ಸಾರಿ ಉತ್ತರಿಸಿದ್ದು, ಮಧ್ಯಾಹ್ನ 2.30 ರ ಹೊತ್ತಿಗೆ ಥಿಯೇಟರ್‌ನಿಂದ ಹೊರಗೆ ಬಂದರು ಅಂತಾ ಉತ್ತರಿಸಿದ್ದು, 2 ನೇ ಆರೋಪಿ ಅಲ್ಲಿದ್ದ ಕಟ್ಟೆಯ ಮೇಲೆ ಕುಳಿತುಕೊಂಡಿದ್ದ ಅಂತಾ ಉತ್ತರಿಸಿದ್ದು, ಆರೋಪಿ ನಿಖರವಾಗಿ ಎಲ್ಲಿದ್ದ, ಎಲ್ಲಿಂದ ಬಂದಿರುತ್ತಾನೆ ಅಂತಾ ಈ ಸಾಕ್ಷಿ ಸ್ಪಷ್ಟವಾಗಿ ಉತ್ತರಿಸಿರುವುದಿಲ್ಲ. ಪಿರ್ಯಾದಿ ಮತ್ತು 2 ನೇ ಆರೋಪಿ ಮಧ್ಯೆ ಆದಂಥ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಂಡಿರುತ್ತಾರೆ ಅಂತಾ ಹೇಳಿದ್ದು. ರೆಕಾರ್ಡರನ್ನು ಹಾಜರಪಡಿಸಿಲ್ಲ. ನಾನು ಕಾಂಪೌಂಡ್ ಹೊರಗಡೆ ನಿಂತಿದ್ದೇನು ಎಂದು ಸಾಕ್ಷಿ ನುಡಿದಿರುತ್ತಾರೆ ಎಂದರೆ ಸರಿ. ನಾನು ಮತ್ತು ಲೋಕಾಯುಕ್ತ ಸಿಬ್ಬಂದಿ ಒಳಗೆ ಹೋದಾಗ ಹಣ ನೆಲದ ಮೇಲೆ ಬಿದ್ದಿತ್ತು ಅಂತಾ ಸಾಕ್ಷಿ ಉತ್ತರಿಸಿರುತ್ತಾರೆ. ನಾನು ಎಂ.ಎಸ್.ಡಬ್ಲ್ಯೂ ಪದವೀಧರ ಇರುತ್ತೇನೆ ಅಂತಾ ಉತ್ತರಿಸಿರುತ್ತಾರೆ. ಈ ಅಂಶವನ್ನು ಪರಿಶೀಲಿಸಲಾಗಿ, ಪ್ರಾಸಾ.1 - ಗುರುರಾಜು ಈ ಕೇಸಿನ ಪಿರ್ಯಾದಿದಾರ, ನಿಶಾನೆ ಪಿ.2 ರ ಪ್ರಾಯೋಗಿಕ ಪಂಚನಾಮೆದಾರ, ನಿಶಾನೆ ಪಿ.3 ರ ಟ್ರಾಪ್ ಪಂಚನಾಮೆದಾರ ಆಗಿದ್ದು, ಈ ಕೇಸಿನ ಮೂಲ ಸೂತ್ರದಾರ ಪಿರ್ಯಾದಿಯೇ ಸಂಪೂರ್ಣ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಪಿರ್ಯಾದಿಯೇ ಪ್ರತಿಕೂಲ ಸಾಕ್ಷಿ ನುಡಿದಿರುವುದರಿಂದ ವಿಶೇಷ ಅಭಿಯೋಜಕರು ಪಿರ್ಯಾದಿಯನ್ನು ಪಾಟೀ ಸವಾಲು ಮಾಡಿದರೂ ಸಹಿತ

ಯಾವುದೇ ಅಂಶಗಳು ಪಾಟೀ ಸವಾಲಿನಿಂದ ಹೊರ ಬಂದಿಲ್ಲದೇ ಇರುವುದರಿಂದ ಪ್ರಾಸಾ.2 ನೆರಳು ಸಾಕ್ಷಿ ನುಡಿದಿದಂಥ ಸಾಕ್ಷಿಯನ್ನು ನ್ಯಾಯಾಲಯವು ನಂಬತಕ್ಕಂಥ ಸಾಕ್ಷಿ ಆಗಿರುವುದಿಲ್ಲ. ಈ ಸಾಕ್ಷಿಯ ಪ್ರಕಾರವೂ ಸಹಿತ ಆರೋಪಿತರು ಅಪರಾಧ ಮಾಡಿರುತ್ತಾರೆ ಅಂತಾ ರುಜುವಾತು ಆಗಿರುವುದಿಲ್ಲ.

20. ಟ್ರ್ಯಾಪ್ ಪಂಚನಾಮೆ ಸಾಕ್ಷ್ಯದ ಬಗ್ಗೆ: ಪ್ರಾಸಾ.4/ಚಾಸಾ.3 - ರಾಜಪ್ಪ ಇವರು ಟ್ರ್ಯಾಪ್ ಪಂಚನಾಮೆ ಸಾಕ್ಷಿಯಾಗಿದ್ದು, ಪಿರ್ಯಾದಿ ಪರಿಚಯ ಮಾಡಿಕೊಟ್ಟಿದ್ದು ಹಾಗೂ ಪಿರ್ಯಾದಿಗೆ ಕೆಲವು ಸಲಹೆ, ಸೂಚನೆಗಳನ್ನು ನೀಡಿದ್ದು, ಆ ಪ್ರಕಾರ ಪಿರ್ಯಾದಿ ಹೋಗಿ ಹಣ ಕೊಟ್ಟ ನಂತರ ತಲೆ ಮೇಲೆ ಕೈ ಹಾಕಿ ಸವರಿಕೊಂಡ ನಂತರ ಸೂಚನೆ ನೀಡತಕ್ಕದ್ದು ಅಂತಾ ಹೇಳಿದ್ದು, ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಈ ಸಾಕ್ಷಿ ತನ್ನ ಪಾಟೀ ಸವಾಲು ಪ್ಯಾರಾ 32 ರಲ್ಲಿ ಟೇಪ್ ರೆಕಾರ್ಡರಲ್ಲಿ ಧ್ವನಿ ರೆಕಾರ್ಡ್ ಆಗಿತ್ತೆ ಎಂದರೆ ಸಾಕ್ಷಿ ಕೇಳುತ್ತಿರಲಿಲ್ಲ ಎಂದು ನುಡಿದಿರುತ್ತಾರೆ. ಈ ಸಾಕ್ಷಿಯೂ ಸಹಿತ ಪಿರ್ಯಾದಿ ಹೇಳಿದ ಪ್ರಕಾರ ಪಿರ್ಯಾದಿ ಹೇಳಿದಂಥ ಅಂಶಗಳ ಅನುಗುಣವಾಗಿ ಸಾಕ್ಷಿ ನುಡಿದಿರುವುದರಿಂದ ಪಿರ್ಯಾದಿಯೇ ಪ್ರತಿಕೂಲ ಸಾಕ್ಷಿ ನುಡಿದಿರುವುದರಿಂದ ಈ ಸಾಕ್ಷಿ ನುಡಿದಂಥ ಸಾಕ್ಷಿ ಹೇಳಿಕೆಯ ಆಧಾರದ ಮೇಲಿಂದ ಆರೋಪಿ ಅಪರಾಧ ಮಾಡಿರುತ್ತಾರೆ ಅಂತಾ ನ್ಯಾಯಾಲಯವು ಪರಿಗಣಿಸಲು ಬರಲಾರದು.

21. ಇದಕ್ಕೆ ಪೂರಕವಾಗಿ ಪ್ರಾಸಾ.8/ಚಾಸಾ.17 – ಸುರೇಶ್, ಲೋಕಾಯುಕ್ತ ಪಿ.ಸಿ.ಯಾಗಿದ್ದು, ಇವರು ಚಾಸಾ.1 ಇವರು ದೂರು ಕೊಟ್ಟಾಗ ಆ ಸಮಯದಲ್ಲಿ

ರೂ.500 ಮುಖಬೆಲೆಯ 8 ನೋಟುಗಳು, ರೂ.1000 ಮುಖಬೆಲೆಯ 21 ನೋಟುಗಳನ್ನು ಹಾಜರುಪಡಿಸಿದ್ದು, ತನಿಖಾಧಿಕಾರಿಯವರ ನಿರ್ದೇಶದ ಮೇರೆಗೆ ಬೋರೆಗೌಡ ಇವರು ಪಿನಾಪ್ತಲಿನ್ ಪೌಡರನ್ನು ನೋಟುಗಳ ಮೇಲೆ ಲೇಪನಾ ಮಾಡಿದರು. ಆ ಸಮಯದಲ್ಲಿ ನಿಶಾನೆ ಪಿ.4 ರಿಂದ ಪಿ.15 ಫೋಟೋಗಳನ್ನು ತೆಗೆದಿದ್ದರ ಬಗ್ಗೆ ಪ್ರಾಯೋಗಿಕ ಪಂಚನಾಮೆ, ಟ್ರಾಪ್ ಪಂಚನಾಮೆಯಲ್ಲಿ ಫೋಟೋ ತೆಗೆದಿದ್ದರ ಬಗ್ಗೆ ಸಾಕ್ಷಿ ನುಡಿದಿರುತ್ತಾರೆ. ಈ ಸಾಕ್ಷಿ ತನ್ನ ಪಾಟೀ ಸವಾಲಿನಲ್ಲಿ ದೂರಿನಲ್ಲಿ ಏನು ಬರೆದಿದೆ ಅಂತಾ ನಾನು ಓದಿ ನೋಡಿಲ್ಲ. ನಾನು ಪ್ರಾಯೋಗಿಕ ಪಂಚನಾಮೆ ಮತ್ತು ಟ್ರಾಪ್ ಪಂಚನಾಮೆಗೆ ಸಹಿ ಮಾಡಿರುವುದಿಲ್ಲ ಅಂತಾ ಸ್ಪಷ್ಟವಾಗಿ ಒಪ್ಪಿಕೊಂಡಿರುತ್ತಾರೆ. ಆದ್ದರಿಂದ ಪಿರ್ಯಾದಿಯೇ ಪ್ರತಿಕೂಲ ಸಾಕ್ಷಿ ನುಡಿದಿರುವುದರಿಂದ ಈ ಸಾಕ್ಷಿ ನಿಶಾನೆ ಪಿ.2 ಮತ್ತು ಪಿ.3 - ಮಹಜರಿಗೆ ಸಹಿ ಮಾಡಿಲ್ಲದೇ ಇರುವುದರಿಂದ ಈ ಸಾಕ್ಷಿಯ ಪ್ರಕಾರವೂ ಸಹಿತ ಆರೋಪಿತರು ಅಪರಾಧ ಮಾಡಿರುತ್ತಾರೆ ಅಂತಾ ರುಜುವಾತು ಆಗಿರುವುದಿಲ್ಲ.

22. ಆರೋಪಿ **1** ಮತ್ತು **2** ಇವರು ರಾಮನಗರ ತಾಲ್ಲೂಕಿನ ತಹಶೀಲ್ದಾರ್ ಕಚೇರಿಯಲ್ಲಿ ಖಾತೆ ಬದಲಾವಣೆ ಮಾಡುವ ಅಧಿಕಾರಿ ಆಗಿದ್ದರೋ ಅಥವಾ ಇಲ್ಲವೋ ಎಂಬುದರ ಬಗ್ಗೆ: ನಿಶಾನೆ ಪಿ.41 - ರಾಮನಗರ ತಹಶೀಲ್ದಾರ್ ಇವರು ಮಾಡಿದಂತಾ ಆದೇಶವನ್ನು ಪರಿಶೀಲಿಸಲಾಗಿ, 1 ನೇ ಆರೋಪಿ - ಹರ್ಷ ಈತನು ಪ್ರವಾಸ ಕಾರ್ಯಕ್ರಮ ಮತ್ತು ದಿನಚರಿ, ಉಪ ತಹಶೀಲ್ದಾರ್ ದಿನಚರಿ ಪರಿಶೀಲನೆ, ಆರೇ ಸರ್ಕಾರಿ ಪತ್ರಗಳು, ಬಿಡದಿ ಎ.ಎಲ್.ಎನ್, ದಫ್ತರ್ ಗ್ರಾಮ ಲೆಕ್ಕಾಧಿಕಾರಿ ಮತ್ತು ರಾಜಸ್ವ ನಿರೀಕ್ಷಕರು, ಈ ಕೆಲಸ ನಿರ್ವಹಿಸುತ್ತಿದ್ದು, 2 ನೇ ಆರೋಪಿ - ಎಂ.ಎನ್.ಮೋಹನ್ ಇವರನ್ನು ದಿನಾಂಕ

29.07.2010 ರಂದು ನಿಯೋಜಿತರಾಗಿ ಮಾಗಡಿ ತಾಲ್ಲೂಕಿಗೆ ವರ್ಗಾವಣೆ ಮಾಡಲಾಗಿರುತ್ತದೆ. ದೂರನ್ನು ದಿನಾಂಕ 06.08.2010 ರಂದು ಕೊಟ್ಟಿರುವುದರಿಂದ ದೂರು ಕೊಡುವುದಕ್ಕಿಂತ ಪೂರ್ವದಲ್ಲಿ ಮಾಗಡಿಗೆ ವರ್ಗಾವಣೆ ಆಗಿರುವುದರಿಂದ ಹಾಗೂ 1 ನೇ ಆರೋಪಿಗೆ ಖಾತೆ ನಿರ್ವಹಣೆ ಮಾಡತಕ್ಕಂಥ ಅಧಿಕಾರ ಇಲ್ಲದೇ ಇರುವುದರಿಂದ ಸದರಿ ಆರೋಪಿತರು ಖಾತೆಯ ಬದಲಾವಣೆ ಮಾಡುವ ಸಲುವಾಗಿ ಪಿರ್ಯಾದಿಯ ಕಡೆಯಿಂದ ಲಂಚ ಪಡೆದಿರುತ್ತಾರೆ ಅಂತಾ ಪರಿಗಣಿಸಲು ಬರಲಾರದು. ಅದೇ ಪ್ರಕಾರ ನಿಶಾನೆ ಪಿ.43 ದಿನಾಂಕ 12.08.2010 ರಂದು ರಾಮನಗರ ತಹಶೀಲ್ದಾರ್ ಇವರು ಕರ್ನಾಟಕ ಲೋಕಾಯುಕ್ತ ಪೊಲೀಸರಿಗೆ 1 ನೇ ಆರೋಪಿ ಇವರ ಸೇವಾ ಮಾಹಿತಿಯನ್ನು ಕಳುಹಿಸಿದ್ದು, ಸದರಿ ನೌಕರ ದಿನಾಂಕ 06.08.2010 ರಂದು ಮಧ್ಯಾಹ್ನ ಗೈರು ಹಾಜರಿರುತ್ತಾರೆ ಅಂತಾ ಸ್ಪಷ್ಟವಾಗಿ ನಮೂದಿಸಿರುತ್ತಾರೆ. ನಿಶಾನೆ ಪಿ.44 ರಲ್ಲಿ 2 ನೇ ಆರೋಪಿಯನ್ನು ಮಾಗಡಿ ತಾಲ್ಲೂಕಿಗೆ ಆತನನ್ನು ವರ್ಗಾವಣೆ ಮಾಡಲಾಗಿದೆ ಅಂತಾ ಸ್ಪಷ್ಟವಾಗಿ ಆದೇಶ ಮಾಡಿರುತ್ತಾರೆ. ಇದಕ್ಕೆ ಪೂರಕವಾಗಿ ಪ್ರಾಸಾ.13 – ಹೆಚ್.ಮಂಜಪ್ಪ, ತನಿಖಾಧಿಕಾರಿ ಮುಖ್ಯ ವಿಚಾರಣಾ ಪ್ಯಾರಾ 23 ರಲ್ಲಿ ಸದರಿ ಆರೋಪಿಯನ್ನು ವಿಚಾರಿಸಿದಾಗ ತನ್ನ ಹೆಸರು ಎಂ.ಎನ್.ಮೋಹನ್ ಕುಮಾರ್, ತಾನು ಗ್ರಾಮಲೆಕ್ಕಾಧಿಕಾರಿಯಾಗಿದ್ದು ರಾಮನಗರ ಗಣಕ ಶಾಖೆಯಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದು, ದಿನಾಂಕ 29.07.2010 ರಂದು ಮಾಗಡಿ ತಾಲ್ಲೂಕು ಕಚೇರಿಗೆ ವರ್ಗಾವಣೆಯಾಗಿದ್ದು, ತಾನು ರಾಮನಗರಕ್ಕೆ ಕ್ರಿಕೆಟ್ ಆಡಲು ಬಂದಿದ್ದೆ ಅಂತಾ ಉತ್ತರಿಸಿರುತ್ತಾರೆ. ದೂರು ಕೊಡುವ ಸಮಯದಲ್ಲಿ ಈ ಸಾಕ್ಷಿ ಗ್ರಾಮದ ಲೆಕ್ಕಾಧಿಕಾರಿ ಕಚೇರಿ, ರಾಮನಗರದಲ್ಲಿ ಇರುವುದಿಲ್ಲ

ಎಂಬುದರ ಬಗ್ಗೆ ಸ್ಪಷ್ಟವಾಗಿ ಕಂಡು ಬಂದಿರುತ್ತದೆ. ಸದರಿ ಸಾಕ್ಷಿ ಪಾಟೀ ಸವಾಲು ಪ್ಯಾರಾ56 ರಲ್ಲಿ ಚಾಸಾ.1 ತನ್ನ ಫಿರ್ಯಾದಿಯಲ್ಲಿ ಖಾತೆಯ ಬದಲಾವಣೆಗೆ ತಾನು, ತನ್ನ ತಂದೆ ಇಬ್ಬರೂ ಸೇರಿ ದಿನಾಂಕ 16-09-2009 ರಂದು ತಾಲ್ಲೂಕು ಕಚೇರಿಗೆ ಅರ್ಜಿ ಕೊಟ್ಟಿರುತ್ತೇವೆ ಎಂದು ಹೇಳಿರುತ್ತಾರೆ ಅಂದರೆ ಸರಿ. ನಾನು ಹಲವು ಬಾರಿ ಭೇಟಿಯಾಗಿ ಅವರು ನಮ್ಮ ಫೈಲ್ ತರಿಸಿ ನೋಡಿ ಪರಿಶೀಲಿಸುತ್ತೇನೆ ಎಂದು ದಬಾಯಿಸಿ ಕಳುಹಿಸಿದ್ದಾರೆಂದು ಆಪಾದನೆ ಮಾಡಿದ್ದಾರೆ ಅಂದರೆ ಸರಿ. <u>2 ನೇ ಆರೋಪಿಯ ವಿರುದ್ಧ ಲಿಖಿತ ದೂರು ಬಂದಾಗ ಆತ ನಾಡ ಕಚೇರಿ, ಮಾಗಡಿಲ್ಲಿ ಕೆಲಸ ಮಾಡುತ್ತಿದ್ದರು</u>. ಖಾತೆ ಬದಲಾವಣೆ ಕೆಲಸವನ್ನು ಈ ಕೇಸು ಆದ ಸಂದರ್ಭದಲ್ಲಿ ಯಾರು ಮಾಡುತ್ತಿದ್ದಾರೆ ಅಂತಾ ನನಗೆ ಮಾಹಿತಿ ಇಲ್ಲ. 1 ನೇ ಆರೋಪಿ - ಹರ್ಷ ಇವರು ಪ್ರವಾಸ ಕಾರ್ಯಕ್ರಮ, ದಿನಚರಿ ಆರ್.ಐ ಮತ್ತು ತಹಶೀಲ್ದಾರ್ ದಿನಚರಿ ಪರಿಶೀಲನೆ ಮಾಡುವ ಕರ್ತವ್ಯವನ್ನು ಮಾಡುತ್ತಿದ್ದರು ಅಂತಾ ಸ್ಪಷ್ಟವಾಗಿ ಸಾಕ್ಷಿ ನುಡಿದಿರುತ್ತಾರೆ. ಆದ್ದರಿಂದ ಸದರಿ ಆರೋಪಿತರು ಖಾತೆ ಬದಲಾವಣೆ ಮಾಡತಕ್ಕಂಥ ಕೆಲಸವನ್ನು ಮಾಡುತ್ತಿಲ್ಲದೇ ಇರುವುದರಿಂದ ಫಿರ್ಯಾದಿ ಕಡೆಯಿಂದ ಖಾತೆ ಬದಲಾವಣೆ ಮಾಡುವುದಕ್ಕೋಸ್ಕರವಾಗಿ ಲಂಚಕ್ಕೆ ಹಣ ಬೇಡಿಕೆ ಇಟ್ಟಿದ್ದರು ಹಾಗೂ ಲಂಚದ ಹಣವನ್ನು ಪಡೆದಿದ್ದರು ಅಂತಾ ಅಭಿಯೋಜಕ ಪಕ್ಷವು ನಿಸ್ಸಂಶಯವಾಗಿ ರುಜುವಾತುಪಡಿಸಲು ವಿಫಲವಾಗಿರುತ್ತದೆ.

23. <u>ಇತರೇ ಸಾಕ್ಷಿಗಳ ಬಗ್ಗೆ:</u> ಪ್ರಾಸಾ.5/ಚಾಸಾ.6 – ಮಾರುತಿ, ಶಾನ್ ಥಿಯೇಟರ್‌ನ ಮಾಲೀಕನಾಗಿದ್ದು, ಪೊಲೀಸರು ಬಂದಾಗ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ. ನಾನು ಸದರಿ ಆಸ್ತಿಯ ಮಾಲೀಕನಾಗಿರುತ್ತೇನೆ ಅಂತಾ ಸಾಕ್ಷಿ ನುಡಿದಿದ್ದು, ಈ ಸಾಕ್ಷಿ ತನ್ನ ಪಾಟೀ

ಸವಾಲಿನಲ್ಲಿ ನನ್ನ ತಂದೆ ಸುಮಾರು 2 ತಿಂಗಳ ಹಿಂದೆ ಮೃತಪಟ್ಟಿರುತ್ತಾರೆ. ಆಗ ನನ್ನ ತಂದೆ ಥಿಯೇಟರ್ ಮಾಲೀಕರಾಗಿದ್ದರು, ಘಟನೆ ಆಗುವ ಸಮಯದಲ್ಲಿ ನಾನು ಮಾಲೀಕನಿರಲಿಲ್ಲ ಅಂತಾ ಸಾಕ್ಷಿ ನುಡಿದಿರುತ್ತಾರೆ.

24. ಅದೇ ಪ್ರಕಾರ ಪ್ರಾಸಾ.7 – ಡಿ.ಪಿ.ಪ್ರಸನ್ನ, ಪಿಡಬ್ಲ್ಯೂಡಿ ಇಂಜಿನಿಯರ್ ಆಗಿದ್ದು, ಸ್ಥಳಕ್ಕೆ ಸಂಬಂಧಪಟ್ಟಂತೆ ನಿಶಾನೆ ಪಿ.39 - ನಕ್ಷೆ ತಯಾರು ಮಾಡಿ ಕೊಟ್ಟಿದ್ದರ ಬಗ್ಗೆ ಸಾಕ್ಷಿ ನುಡಿದಿರುತ್ತಾರೆ. ಈ ಸಾಕ್ಷಿ ತನ್ನ ಪಾಟೀ ಸವಾಲಿನಲ್ಲಿ ಸ್ಥಳದಲ್ಲಿ ಟಿಕೆಟ್ ಕೌಂಟರ್ ಎಲ್ಲಿದೆ ಮತ್ತು ವಾಹನ ಪಾರ್ಕಿಂಗ್ ಎಲ್ಲಿದೆ ಎಂದು ನನಗೆ ಗೊತ್ತಿಲ್ಲ. ಅಲ್ಲಿ ಸಿಮೆಂಟ್ ಕಟ್ಟೆ ಇರುವುದನ್ನು ನಕಾಶೆಯಲ್ಲಿ ತೋರಿಸಿದ್ದೇನೆ. ಕಟ್ಟೆ ಮೇಲೆ ಮರ, ಗಿಡ ಇದೆಯೋ ನನಗೆ ಗೊತ್ತಿಲ್ಲ. ನಾನು ನೋಡಿದಾಗ ಗಸೆಗಸೆ ಗಿಡ ಇತ್ತು ಅಂತಾ ಉತ್ತರಿಸಿರುತ್ತಾರೆ. ಆದ್ದರಿಂದ ಈ ಸಾಕ್ಷಿ ಸ್ಥಳದಲ್ಲಿ ಹೋಗಿ ಮಹಜರ್ ಮಾಡಿರುತ್ತಾರೆ ಅಂತಾ ರುಜುವಾತು ಆಗಿರುವುದಿಲ್ಲ. ಅದೇ ಪ್ರಕಾರ ಪ್ರಾಸಾ.9 - ಹರಿಪ್ರಸಾದ್, 2 ನೇ ಆರೋಪಿಯ ಸಹೋದರನಾಗಿದ್ದು, ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಈ ಸಾಕ್ಷಿಗಳ ಮುಖಾಂತರವೂ ಸಹಿತ ಆರೋಪಿ ಅಪರಾಧ ಮಾಡಿರುತ್ತಾರೆ ಅಂತಾ ರುಜುವಾತುವಾಗಿರುವುದಿಲ್ಲ.

25. ತನಿಖಾಧಿಕಾರಿಯ ಸಾಕ್ಷಿಯ ಬಗ್ಗೆ: ಪ್ರಾಸಾ.13 - ಹೆಚ್.ಮಂಜಪ್ಪ, ತನಿಖಾಧಿಕಾರಿಯವರು ಈ ಕೇಸಿನ ತನಿಖೆ ಪೂರ್ತಿಗೊಳಿಸಿ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದು, ಇವರು ತಮ್ಮ ಪಾಟೀ ಸವಾಲು ಪ್ಯಾರಾ48 ರಲ್ಲಿ ದಿನಾಂಕ 03.08.2010 ರಂದು ಚಾಸಾ.1 ರವರು ನಮ್ಮ ಠಾಣೆಗೆ ಬಂದು ಯಾವುದೇ ಲಿಖಿತ ದೂರು

ಕೊಟ್ಟಿಲ್ಲ ಎಂದರೆ ಸರಿ. 1 ನೇ ಆರೋಪಿಯವರ ಹತ್ತಿರ ತಮ್ಮ ಕೆಲಸ ಬಾಕಿಯಿದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಲಿಲ್ಲ ಎಂದರೆ ಸರಿ. ಮೌಖಿಕ ಹೇಳಿಕೆಯ ಆಧಾರದ ಮೇಲೆ ದಿನಾಂಕ 03-08-2010 ರಲ್ಲಿ ನಾನು ಯಾವುದೇ ಕೇಸು ದಾಖಲು ಮಾಡಿಲ್ಲ ಎಂದರೆ ಸರಿ ಅಂತಾ ಒಪ್ಪಿಕೊಂಡಿರುತ್ತಾರೆ. ನಿಶಾನೆ ಪಿ.1 ದೂರಿನಲ್ಲಿ ದಿನಾಂಕ 03-08-2010 ರಂದು ಲೋಕಾಯುಕ್ತ ಪೊಲೀಸ್ ಠಾಣೆಗೆ ಹೋಗಿ ವಿಚಾರ ತಿಳಿಸಿ ಟೇಪ್ ರೆಕಾರ್ಡರನ್ನು ತೆಗೆದುಕೊಂಡು ಹೋದೆನು ಅಂತಾ ದೂರಿನಲ್ಲಿ ನಮೂದಿಸಿದ್ದು, ಟೇಪ್ ರೆಕಾರ್ಡರನ್ನು ಪೊಲೀಸ್ ಅಧಿಕಾರಿಗಳಿಂದ ತೆಗೆದುಕೊಂಡು ಹೋಗಿ ಪಿರ್ಯಾದಿ ಮತ್ತು 2 ನೇ ಆರೋಪಿಯ ಮಧ್ಯೆ ಸಂಭಾಷಣೆ ನಡೆದ ಬಗ್ಗೆ ರೆಕಾರ್ಡ್ ಮಾಡಿದ್ದು, ಟೇಪ್ ರೆಕಾರ್ಡರನ್ನು ಅಮಾನತ್ತುಪಡಿಸಿಕೊಂಡಿಲ್ಲದೇ ಇರುವುದರಿಂದ 2 ನೇ ಆರೋಪಿ ಇವರು ಪಿರ್ಯಾದಿಗೆ ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದ, ಅದನ್ನು ಸ್ವೀಕರಿಸಿದ್ದ ಅಂತಾ ರುಜುವಾತು ಆಗಿರುವುದಿಲ್ಲ.

26. ಸದರಿ ಸಾಕ್ಷಿ ಮುಂದುವರೆದ ಪಾಟೀ ಸವಾಲಿನಲ್ಲಿ ದಿನಾಂಕ 03.08.2010 ರಂದು ಚಾಸಾ.1 ರವರು ಮೈಕ್ರೋ ಟೇಪ್ ರೆಕಾರ್ಡರ ಬಗ್ಗೆ ನಮ್ಮ ದಾಖಲೆಯಲ್ಲಿ ಉಲ್ಲೇಖ ಇಲ್ಲ ಎಂದರೆ ಸರಿ. 1 ನೇ ಆರೋಪಿ ಪಿರ್ಯಾದಿಯ ಬಳಿ ಹಣ ಕೇಳಿ ಮೊಬೈಲ್ ಕರೆ ಮಾಡಿಲ್ಲ ಅಂದರೆ ಸರಿ. ಸದರಿ ಟೇಪ್ ರೆಕಾರ್ಡರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ಟೇಪ್ ರೆಕಾರ್ಡರಿನಲ್ಲಿ ಏನೇನು ಸಂಭಾಷಣೆ ದಾಖಲಾಗಿತ್ತು ಎಂಬುದರ ಬಗ್ಗೆ ಪ್ರಾಯೋಗಿಕ ಪಂಚನಾಮೆಯಲ್ಲಿ ತೋರಿಸಿಲ್ಲ ಎಂದರೆ ಸರಿ. ಟೇಪ್ ರೆಕಾರ್ಡರನಲ್ಲಿ ಹಣಕ್ಕಾಗಿ ಯಾವುದೇ ಬೇಡಿಕೆ ಇಟ್ಟ ಬಗ್ಗೆ ಸಂಭಾಷಣೆ ಇರಲಿಲ್ಲ. ಹಾಗಾಗಿ ಸದರಿ ಟೇಪ್

ರೆಕಾರ್ಡರನ್ನು ಉದ್ದೇಶ ಪೂರ್ವಕವಾಗಿ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ಸದರಿ ದಾಖಲೆಯನ್ನು ಹಾಜರುಪಡಿಸಿದರೆ ಕೇಸು ದಾಖಲು ಮಾಡಲು ಸಾಧ್ಯವಾಗುವುದಿಲ್ಲ ಎಂಬ ಕಾರಣಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ಈ ಅಂಶವನ್ನು ಪರಿಶೀಲಿಸಲಾಗಿ, ತನಿಖಾಧಿಕಾರಿಯವರಿಗೆ ಸಂಪೂರ್ಣವಾಗಿ ಆರೋಪಿತರು ಲಂಚದ ಹಣಕ್ಕೆ ಬೇಡಿಕೆ ಇಟ್ಟಿಲ್ಲ, ಇದರ ಬಗ್ಗೆ ಸಂಭಾಷಣೆ ಆಗಿರುವುದಿಲ್ಲ ಎಂಬುದರ ಬಗ್ಗೆ ಗೊತ್ತಿದ್ದರೂ ಸಹಿತ ಕೇಸು ದಾಖಲು ಮಾಡಿದ್ದನ್ನು ಪರಿಶೀಲಿಸಲಾಗಿ, ಸದರಿಯವರು ಸಮರ್ಪಕವಾಗಿ ತನಿಖೆ ಮಾಡಿಲ್ಲದೇ ಇರುವುದರ ಬಗ್ಗೆ ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ.

27. ಸದರಿ ಸಾಕ್ಷಿ ಮುಂದುವರೆದ ಪಾಟೀ ಸವಾಲು ಪ್ಯಾರಾ.10 ರಲ್ಲಿ ದೂರು ಪಡೆದುಕೊಂಡ ನಂತರ ಪಿರ್ಯಾದಿಯ ಕೆಲಸ ಯಾವ ವ್ಯಕ್ತಿಯ ಮುಂದೆ ಇದೆ ಅಂತಾ ಪ್ರಾಥಮಿಕ ತನಿಖೆ ಮಾಡಿಲ್ಲ. ದೂರು ಕೊಟ್ಟ ಸಮಯದಲ್ಲಿ ಪಿರ್ಯಾದಿಗೆ ಸಂಬಂಧಪಟ್ಟ ಕೆಲಸ 1 ಮತ್ತು 2 ನೇ ಆರೋಪಿತರ ಮುಂದೆ ಇರಲಿಲ್ಲ ಎಂದರೆ ಸರಿ. ಪಾಟೀ ಸವಾಲು ಪ್ಯಾರಾ 63-64 ರಲ್ಲಿ 2 ನೇ ಆರೋಪಿ ಮಾಗಡಿ ತಾಲ್ಲೂಕು ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ಎಂದರೆ ಸರಿ. ಆ ದಿನ 2 ನೇ ಆರೋಪಿ ಮಾಗಡಿಯಲ್ಲಿ ಕೆಲಸ ಮಾಡುತ್ತಿದ್ದರ ಬಗ್ಗೆ ಎಫ್.ಐ.ಆರ್ ನಲ್ಲಿ ವಿಳಾಸ ತೋರಿಸಿಲ್ಲ ಎಂದರೆ ಸರಿ. 2 ನೇ ಆರೋಪಿ ಮೋಹನ್ ಕುಮಾರ್ ದೂರುದಾರರನ್ನು ದಿನಾಂಕ 03.08.2009 ರಂದು ಖುದ್ದಾಗಿ ಎಲ್ಲಿ ಭೇಟಿಯಾದರೂ ಎಂಬುದರ ಬಗ್ಗೆ ಉಲ್ಲೇಖ ಇಲ್ಲ ಎಂದರೆ ಸರಿ. 1 ನೇ ಆರೋಪಿ - ಹರ್ಷ ಬಿಡದಿ ಶಾಖೆಯಲ್ಲಿ ಕೆಲಸ ಮಾಡುತ್ತಿದ್ದು, 2 ನೇ ಆರೋಪಿ - ಮೋಹನ್ ಕುಮಾರ್

ಮಾಗಡಿಯಲ್ಲಿ ಕೆಲಸ ಮಾಡುತ್ತಿದ್ದ ಎಂದರೆ ಸರಿ. ದೂರು ಕೊಡುವ ಸಮಯಕ್ಕೆ ಟೇಪ್ ರೆಕಾರ್ಡರನ್ನು ಕೊಟ್ಟು ಕಳುಹಿಸಿದ್ದೆ ಅಂದರೆ ಸರಿ. ಅದರಲ್ಲಿ ಯಾವುದೇ ಸಂಭಾಷಣೆ ಪಿರ್ಯಾದಿ ರೆಕಾರ್ಡ್ ಮಾಡಿಕೊಂಡಿಲ್ಲ ಎಂದರೆ ಸರಿ. ಈ ಎಲ್ಲಾ ಅಂಶಗಳನ್ನು ಪರಿಶೀಲಿಸಲಾಗಿ, ಎಲ್ಲಾ ಪ್ರಶ್ನೆಗಳಿಗೂ ಸಹಿತ ಸದರಿ ತನಿಖಾಧಿಕಾರಿಯವರು ಸರಿ, ಸರಿ ಅಂತಾ ಉತ್ತರಿಸಿರುವುದರಿಂದ ಸಮರ್ಪಕವಾಗಿ ತನಿಖೆ ಮಾಡಿಲ್ಲದೇ ಇರುವುದರ ಬಗ್ಗೆ ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ಈ ಮೇಲ್ಕಂಡಂತ ಸಾಕ್ಷಿ, ದಾಖಲೆಗಳ ಮುಖಾಂತರ ಪಿರ್ಯಾದಿಯ ಕೆಲಸ ಬಾಕಿ ಇತ್ತು ಅಂತಾ ರುಜುವಾತು ಆಗಿರುವುದಿಲ್ಲ. ಪಿರ್ಯಾದಿಯ ಕೆಲಸ ಬಾಕಿಯಿಲ್ಲದೇ ಇರುವುದರಿಂದ ಆರೋಪಿರು ಪಿರ್ಯಾದಿಗೆ ಖಾತೆ ಬದಲಾವಣೆ ಮಾಡುವ ಸಲುವಾಗಿ ರೂ.50 ಸಾವಿರ ಹಣವನ್ನು ಲಂಚವಾಗಿ ಬೇಡಿಕೆ ಇಟ್ಟಿದ್ದ ಅಂತಾ ರುಜುವಾತು ಆಗಿರುವುದಿಲ್ಲ ಹಾಗೂ 2 ನೇ ಆರೋಪಿ ಮಾಗಡಿಯಲ್ಲಿ ಕೆಲಸ ಮಾಡುತ್ತಿದ್ದು 1 ನೇ ಆರೋಪಿ ಸರ್ವೆ ಪರಿವರ್ತನೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದು, ಖಾತೆ ಬದಲಾವಣೆ ಮಾಡತಕ್ಕಂಥ ಅಧಿಕಾರಿಗಳು ಆಗಿರುವುದಿಲ್ಲ ಹಾಗೂ ಈ ಕೇಸಿನ ಪ್ರಮುಖ ಸಾಕ್ಷಿಯಾದಂಥ ದೂರುದಾರರು ಆದಂಥ ಪ್ರಾಸಾ.1 ಇವರೇ ಪ್ರತಿಕೂಲ ಸಾಕ್ಷಿ ನುಡಿದಿರುವುದರಿಂದ, ಆರೋಪಿತರು ಪಿರ್ಯಾದಿಯ ಖಾತೆ ಬದಲಾವಣೆಗೆ ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದರು ಅಂತಾ ಅಭಿಯೋಜಕ ಪಕ್ಷವು ನಿಸ್ಸಂಶಯವಾಗಿ ರುಜುವಾತುಪಡಿಸಲು ವಿಫಲವಾಗಿರುತ್ತದೆ.

28. ಆರೋಪಿತರ ಪರ ವಕೀಲರು ಹಾಜರುಪಡಿಸಿದಂಥ ತೀರ್ಪು:- ***CRIMINAL APPEAL NO.200018/2016 (KAMANNA VS. THE STATE***

***OF KARNATAKA),*** ಸದರಿ ತೀರ್ಪ ಪ್ಯಾರಾ 14 ರಲ್ಲಿ ಭ್ರಷ್ಟಾಚಾರ ಅಧಿನಿಯಮ ಕಲಂ.7, 13 ರ ಅಡಿಯಲ್ಲಿ ದಾಖಲಾದಾಗ ಆರೋಪಿ ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದರು ಎಂಬುದರ ಬಗ್ಗೆ, ಆ ಸಮಯದಲ್ಲಿ ಪಿರ್ಯಾದಿಯ ಕೆಲಸ ಬಾಕಿ ಇತ್ತು ಎಂಬುದರ ಬಗ್ಗೆ ರುಜುವಾತುಪಡಿಸತಕ್ಕದ್ದು ಹಾಗೂ ಪ್ಯಾರಾ 16 ರಲ್ಲಿ ಈಗಾಗಲೇ ಪಿರ್ಯಾದಿ ಕೊಟ್ಟಂಥ ಅರ್ಜಿ ತಿರಸ್ಕರಿಸಿದ್ದರಿಂದ ಮತ್ತು ಎರಡನೇ ಸಲ ಕೊಟ್ಟಂಥ ಅರ್ಜಿಯೂ ಸಹಿತ ಇತ್ಯರ್ಥವಾಗಿರುವುದರಿಂದ ಲಂಚ ಹಣಕ್ಕೆ ಸಂಬಂಧಪಟ್ಟಂತೆ ಬೇಡಿಕೆ ಉದ್ಭವ ಆಗುವುದಿಲ್ಲ ಎಂಬುದರ ಬಗ್ಗೆ ತೀರ್ಪಿನಲ್ಲಿ ತಿಳಿಸಿರುವುದರಿಂದ, ಸದರಿ ತೀರ್ಪಿನ ಪ್ರಕಾರ ಪಿರ್ಯಾದಿಯ ಕೆಲಸ ಬಾಕಿ ಇಲ್ಲದೇ ಇರುವುದರಿಂದ ಹಾಗೂ ಮೊದಲು ಕೊಟ್ಟಂಥ ಖಾತೆ ಬದಲಾವಣೆ ಅರ್ಜಿ ತಿರಸ್ಕರಿಸಿರುವುದರಿಂದ ದೂರು ಕೊಡುವ ಸಮಯದಲ್ಲಿ ಪಿರ್ಯಾದಿಯ ಕೆಲಸ ಬಾಕಿ ಇಲ್ಲದೇ ಇರುವುದರಿಂದ ಸದರಿ ತೀರ್ಪಿನ ಪ್ರಕಾರ ಆರೋಪಿತರು ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದರು ಎಂಬುದರ ಬಗ್ಗೆ ರುಜುವಾತು ಆಗಿರುವುದಿಲ್ಲ.

29. ಅದೇ ಪ್ರಕಾರ ***CRIMINAL APPEAL NO. 200040/2021 (378) (STATE OF KARNATKA VS. LOKNATH AND ANOTHER)*** ಸದರಿ ತೀರ್ಪಿನ ಪ್ಯಾರಾ 19 ರಿಂದ 23 ನ್ನು ಪರಿಶೀಲಿಸಲಾಗಿ, ಅಭಿಯೋಜಕ ಪಕ್ಷವು ಪ್ರಥಮವಾಗಿ ಆರೋಪಿತರು ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದರು ಅಂತಾ ನಿಸ್ಸಂಶಯವಾಗಿ ರುಜುವಾತುಪಡಿಸತಕ್ಕದ್ದು. ಕೇವಲ ಆರೋಪಿರ ಬಳಿ ಹಣ ಸಿಕ್ಕಿದೆ ಎಂಬ ಆಧಾರದ ಮೇಲಿಂದ ಅದು ಲಂಚದ ಹಣ ಇರುತ್ತದೆ ಅಂತಾ ಪರಿಗಣಿಸಲು ಬರಲಾರದು ಹಾಗೂ ಪಿರ್ಯಾದಿಯು ಪ್ರತಿಕೂಲ ಸಾಕ್ಷಿ ನುಡಿದಿರುವುದರಿಂದ ನೆರಳು

ಸಾಕ್ಷಿಯ ಸಾಕ್ಷಿಯನ್ನು ಪರಿಗಣಿಸಲು ಬರಲಾರದು. ಅದೇ ಪ್ರಕಾರ ಪ್ಯಾರಾ 28 ರಲ್ಲಿ ಪಿರ್ಯಾದಿಯು ಅಭಿಯೋಜಕ ಪಕ್ಷಕ್ಕೆ ಪೂರಕವಾಗಿ ಸಾಕ್ಷಿ ನುಡಿದಿಲ್ಲದೆ ಇರುವುದರಿಂದ ಅಂತಾ ಸಂದರ್ಭದಲ್ಲಿ ಆರೋಪಿತರು ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದರು ಅಂತಾ ರುಜುವಾತುಪಡಿಸಿದೆ ಅಂತಾ ಪರಿಗಣಿಸಲು ಬರಲಾರದು.

30. ಅದೇ ಪ್ರಕಾರ ಸದರಿ ತೀರ್ಪಿಗೆ ಅನುಗುಣವಾಗಿ ***<u>CRIMINAL APPEAL NO.200110/2015 (STATE OF KARNATAKA VS. BABURAO AND ANOTHER)</u>*** ಸದರಿ ತೀರ್ಪಿನ ಪ್ಯಾರಾ 19 ರಲ್ಲಿ ಪಿರ್ಯಾದಿ ಅಭಿಯೋಜಕ ಪೂರಕವಾಗಿ ಸಾಕ್ಷಿ ನುಡಿದಿಲ್ಲದೆ ಇರುವುದರಿಂದ ಆರೋಪಿತರು ಅಪರಾಧ ಮಾಡಿದ್ದಾರೆ ಅಂತಾ ಪರಿಗಣಿಸಲು ಬರಲಾರದು ಅಂತಾ ತೀರ್ಪು ಇರುತ್ತದೆ.

31. ಅದೇ ಪ್ರಕಾರ ***<u>CRIMINAL APPEAL NO.200093/2017 (MANMATHAYYA VS. THE STATE OF KARNATAKA) C/W. CRIMINAL APPEAL NO.200099/2017 (DILEEP VS. THE STATE THROUGH LOKAYUKTA POLICE, KALABURAGI)</u>*** ಸದರಿ ತೀರ್ಪಿನ ಪ್ಯಾರಾ 19 ರಿಂದ 25 ನ್ನು ಪರಿಶೀಲಿಸಲಾಗಿ, ಪ್ರಥಮವಾಗಿ ಆರೋಪಿ ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದ, ಆ ಸಮಯದಲ್ಲಿ ಪಿರ್ಯಾದಿಯ ಕೆಲಸ ಬಾಕಿ ಇತ್ತು. ಆ ಕೆಲಸ ಮಾಡುವ ಸಲುವಾಗಿ ಆಗಾಗ ಲಂಚದ ಹಣ ಕೇಳುತ್ತಿದ್ದ, ಆ ಹಣವನ್ನು ಲಂಚವಾಗಿ ಸ್ವೀಕರಿಸಿದ್ದ ಅಂತಾ ನಿಸ್ಸಂಶಯವಾಗಿ ಅಭಿಯೋಜಕ ಪಕ್ಷವು ರುಜುವಾತುಪಡಿಸತಕ್ಕದ್ದು. ಕೇವಲ ಆರೋಪಿ ಬಳಿ ಹಣ ವಸೂಲಿ

ಮಾಡಲಾಯಿತು, ಹಣ ಇತ್ತು ಎಂಬ ಆಧಾರ ಮೇಲಿಂದ ಅದು ಲಂಚದ ಹಣ ಇರುತ್ತದೆ ಅಂತಾ ನ್ಯಾಯಾಲಯ ಪೂರ್ವ ಭಾವನೆ ಮಾಡಲು ಬರಲಾರದು ಅಂತಾ ತೀರ್ಪು ಇರುತ್ತದೆ. ಈ ಮೇಲ್ಕಂಡ ಎಲ್ಲಾ ತೀರ್ಪುಗಳನ್ನು ಈ ಕೇಸಿಗೆ ಪರಿಶೀಲಿಸಲಾಗಿ, ಈ ಕೇಸಿನ ಪ್ರಮುಖ ಸಾಕ್ಷಿದಾರರು ಆದ್ದಂತಾ, ನಿಶಾನೆ ಪಿ.1 - ದೂರುದಾರರು, ನಿಶಾನೆ ಪಿ.2 - ಪ್ರಾಯೋಗಿಕ ಪಂಚನಾಮೆ, ನಿಶಾನೆ ಪಿ.3 - ಟ್ರಾಪ್ ಪಂಚನಾಮೆದಾರರು ಆದ್ದಂಥ ಪ್ರಾಸಾ.1 ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಸದರಿ ಸಾಕ್ಷಿ ಪ್ರತಿಕೂಲ ಸಾಕ್ಷಿ ನುಡಿದಿರುವುದರಿಂದ, ಈ ಮೇಲ್ಕಂಡ ತೀರ್ಪಿನ ಪ್ರಕಾರ ಆರೋಪಿತರು ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದರು, 2 ನೇ ಆರೋಪಿ ರೂ.25,000/- ಲಂಚದ ಹಣವನ್ನು ಪಿರ್ಯಾದಿಯಿಂದ ಸ್ವೀಕರಿಸಿದ್ದ ಅಂತಾ ರುಜುವಾತು ಆಗಿರುವುದಿಲ್ಲ. ಆದ್ದರಿಂದ ಈ ಮೇಲ್ಕಂಡ ತೀರ್ಪುಗಳ ಪ್ರಕಾರವೂ ಸಹಿತ ಆರೋಪಿತರು ದೋಷಾರೋಪಣಾ ಪಟ್ಟಿಯಲ್ಲಿ ನಮೂದಿಸಿದ ಪ್ರಕಾರ ಅಪರಾಧ ಮಾಡಿರುತ್ತಾರೆ ಅಂತಾ ನಿಸ್ಸಂಶಯವಾಗಿ ರುಜುವಾತುಪಡಿಸಲು ವಿಫಲವಾಗಿರುವುದರಿಂದ, ಸದರಿ ಅಂಶ ಸಂಖ್ಯೆ ***1*** ಮತ್ತು ***2*** ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

32. <u>ಅಂಶ ಸಂಖ್ಯೆ **3**:</u> ಅಂಶ ಸಂಖ್ಯೆ 1 ಮತ್ತು 2 ಕ್ಕೆ ನೀಡಿದ ಕಾರಣ ಹಾಗೂ ಉತ್ತರಗಳಿಗಾಗಿ ಈ ಕೆಳಕಂಡಂತೆ ಆದೇಶಃ

## <u>ಆದೇಶ</u>

ದಂಡ ಪ್ರಕ್ರಿಯಾ ಸಂಹಿತೆ ಕಲಂ.235(1) ರಡಿಯಲ್ಲಿನ ಪ್ರದತ್ತವಾದ ಅಧಿಕಾರದ ಮುಖಾಂತರ ಆರೋಪಿತರ ವಿರುದ್ಧ ಆರೋಪಣೆ ಮಾಡಲಾದ ಭ್ರಷ್ಟಾಚಾರ ನಿರ್ಮೂಲನ ಕಾಯಿದೆ

ಕಲಂ.7 ಮತ್ತು 13(1)(d) ಸಹಕಲಂ.13(2)ರ ಅಡಿಯಲ್ಲಿನ ಅಪರಾಧದಿಂದ ದೋಷಮುಕ್ತಗೊಳಿಸಲಾಗಿದೆ.

ಸದರಿ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಿದರೆ ಆರೋಪಿತರ ಹಾಜರಾತಿಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಆರೋಪಿತರು ಮಾನ್ಯ ನ್ಯಾಯಾಲಯಕ್ಕೆ ದಂಡ ಪ್ರಕ್ರಿಯಾ ಸಂಹಿತೆ ಕಲಂ.437(ಎ) ಕಾನೂನಿನ ಅಡಿಯಲ್ಲಿ ಈ ಮೊದಲು ಬರೆದುಕೊಟ್ಟ ಜಾಮೀನನ್ನು 6 ತಿಂಗಳವರೆಗೆ ಮುಂದುವರೆಸಲು ಆದೇಶಿಸಲಾಗಿದೆ. ನಂತರದ ಅವಧಿಯಲ್ಲಿ ಜಾಮೀನು ಮುಚ್ಚಳಿಕೆ ಪತ್ರವನ್ನು ರದ್ದುಪಡಿಸಲಾಯಿತು.

ಮು.ಮಾ.1 - ಹಣವನ್ನು ಮೇಲ್ಮನವಿ ಅವಧಿ ಮುಗಿದ ನಂತರ ರಿಸರ್ವ್ ಬ್ಯಾಂಕ್‌ಗೆ ಕಳುಹಿಸಿಕೊಡಲು ಆದೇಶಿಸಲಾಯಿತು.

ಮು.ಮಾ.2 ರಿಂದ 9 - ಬೆಲೆ ಬಾಳದ ವಸ್ತುವಾಗಿರುವುದರಿಂದ ಅದನ್ನು ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸಲು ಆದೇಶಿಸಲಾಯಿತು.

*(ಈ ಆದೇಶದ ಉಕ್ತಲೇಖನವನ್ನು ಶೀಘ್ರಲಿಪಿಗಾರ್ತಿ ಗ್ರೇಡ್ -III ರವರಿಗೆ ನೀಡಿದ್ದು, ನಂತರ ಅವರು ಗಣಕೀಕರಿಸಿದ್ದನ್ನು ಓದಿ, ತಿದ್ದಿ ಇದೇ ದಿನಾಂಕ **5** ನೇ ಜೂನ್ ಮಾಹೆ **2026** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)*

**(ಎಂ.ಹೆಚ್. ಅಣ್ಣಯ್ಯನವರ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಮನಗರ.

*** ***

**-: ಅನುಬಂಧ :-**

**ಅಭಿಯೋಜನೆ ಪರವಾಗಿ ಮಾಡಿದ ಸಾಕ್ಷಿಗಳ ವಿವರಃ-**

| | | |
|---|---|---|
| ಪ್ರಾಸಾ.1 | : | ಗುರುರಾಜು |
| ಪ್ರಾಸಾ.2 | : | ಎಸ್.ಯೋಗೇಶ |
| ಪ್ರಾಸಾ.3 | : | ಡಾ.ಎಂ.ವಿ.ವೆಂಕಟೇಶ |
| ಪ್ರಾಸಾ.4 | : | ರಾಜಪ್ಪ |

| | | |
|---|---|---|
| ಪ್ರಾಸಾ.5 | : | ಮಾರುತಿ |
| ಪ್ರಾಸಾ.6 | : | ರವಿ ಎಂ.ತಿರ್ಲಾಪುರ |
| ಪ್ರಾಸಾ.7 | : | ಡಿ.ಪಿ.ಪ್ರಸನ್ನ |
| ಪ್ರಾಸಾ.8 | : | ಸುರೇಶ |
| ಪ್ರಾಸಾ.9 | : | ಹರಿಪ್ರಸಾದ |
| ಪ್ರಾಸಾ.10 | : | ಸೈಯದ್ ನಿಜಾಮುದ್ದೀನ್ |
| ಪ್ರಾಸಾ.11 | : | ಡಾ.ನಟೇಶ ಡಿ.ಬಿ. |
| ಪ್ರಾಸಾ.12 | : | ಸಣ್ಣತಮ್ಮಪ್ಪಯ್ಯ ಒಡೆಯರ್ |
| ಪ್ರಾಸಾ.13 | : | ಹೆಚ್.ಮಂಜಪ್ಪ |
| ಪ್ರಾಸಾ.14 | : | ಆರ್.ಪಿ.ಅನಿಲ್ |

<u>ಅಭಿಯೋಜನೆ ಪರವಾಗಿ ಮಾಡಿದ ದಾಖಲೆಗಳ ವಿವರಃ-</u>

| | | |
|---|---|---|
| ನಿಶಾನೆ ಪಿ.1 | : | ದೂರು |
| ನಿಶಾನೆ ಪಿ.1(1) | : | ಪ್ರಾಸಾ.1 ರವರ ಸಹಿ |
| ನಿಶಾನೆ ಪಿ.2 | : | ಪ್ರಾಯೋಗಿಕ ಪಂಚನಾಮೆ |
| ನಿಶಾನೆ ಪಿ.2(ಎ) | : | ಪ್ರಾಸಾ.1 ರವರ ಸಹಿ |
| ನಿಶಾನೆ ಪಿ.2(ಬಿ) | : | ಪ್ರಾಸಾ.2 ರವರ ಸಹಿ |
| ನಿಶಾನೆ ಪಿ.2(ಸಿ) | : | ಪ್ರಾಸಾ.4 ರವರ ಸಹಿ |
| ನಿಶಾನೆ ಪಿ.2(ಡಿ) | : | ಪ್ರಾಸಾ.13 ರವರ ಸಹಿ |
| ನಿಶಾನೆ ಪಿ.3 | : | ಟ್ರ್ಯಾಪ್ ಪಂಚನಾಮೆ |
| ನಿಶಾನೆ ಪಿ.3(ಎ) | : | ಪ್ರಾಸಾ.1 ರವರ ಸಹಿ |
| ನಿಶಾನೆ ಪಿ.3(ಬಿ) | : | ಪ್ರಾಸಾ.2 ರವರ ಸಹಿ |
| ನಿಶಾನೆ ಪಿ.3(ಸಿ) | : | ಪ್ರಾಸಾ.4 ರವರ ಸಹಿ |
| ನಿಶಾನೆ ಪಿ.3(ಡಿ) | : | ಪ್ರಾಸಾ.13 ರವರ ಸಹಿ |
| ನಿಶಾನೆ ಪಿ.4 ರಿಂದ ಪಿ.15 | : | ಪ್ರಾಯೋಗಿಕ ಪಂಚನಾಮೆ ಕಾಲದ ಫೋಟೋಗಳು |
| ನಿಶಾನೆ ಪಿ.4(ಎ) ರಿಂದ | : | ನೆಗೆಟೀವ್ಸ್ |

| | | |
|---|---|---|
| ಪಿ.15(ಎ) | | |
| ನಿಶಾನೆ ಪಿ.16 ರಿಂದ ಪಿ.20 | : | ಟ್ರಾಪ್ ಕಾಲದ ಫೋಟೋಗಳು |
| ನಿಶಾನೆ ಪಿ.16(ಎ) ರಿಂದ ಪಿ.20(ಎ) | : | ನೆಗೆಟೀವ್ಸ್ |
| ನಿಶಾನೆ ಪಿ.21 | : | ಪಿರ್ಯಾದಿಯ ಹೇಳಿಕೆ |
| ನಿಶಾನೆ ಪಿ.22 | : | ಪಿರ್ಯಾದಿಯ ಮರುಹೇಳಿಕೆ |
| ನಿಶಾನೆ ಪಿ.23 | : | ಪಿರ್ಯಾದಿಯ ಮರುಹೇಳಿಕೆ ದಿನಾಂಕ 03.09.2010 |
| ನಿಶಾನೆ ಪಿ.24 | : | ದಿಃ18.04.2012 ರ ಮರುಹೇಳಿಕೆ |
| ನಿಶಾನೆ ಪಿ.25 | : | ನೋಟುಗಳ ಮೌಲ್ಯ ಮತ್ತು ನಂಬರ್ ಬರೆದಿರುವ ಹಾಳೆ |
| ನಿಶಾನೆ ಪಿ.25(ಎ) | : | ಪ್ರಾಸಾ.2 ರವರ ಸಹಿ |
| ನಿಶಾನೆ ಪಿ.25(ಬಿ) | : | ಪ್ರಾಸಾ.4 ರವರ ಸಹಿ |
| ನಿಶಾನೆ ಪಿ.25(ಸಿ) | : | ಪ್ರಾಸಾ.13 ರವರ ಸಹಿ |
| ನಿಶಾನೆ ಪಿ.26 | : | ಸ್ವೀಕೃತಿ ಪತ್ರ |
| ನಿಶಾನೆ ಪಿ.26(ಎ) | : | ಪ್ರಾಸಾ.2 ರವರ ಸಹಿ |
| ನಿಶಾನೆ ಪಿ.26(ಬಿ) | : | ಪ್ರಾಸಾ.4 ರವರ ಸಹಿ |
| ನಿಶಾನೆ ಪಿ.26(ಸಿ) | : | ಪ್ರಾಸಾ.13 ರವರ ಸಹಿ |
| ನಿಶಾನೆ ಪಿ.27 | : | ನಕ್ಷೆ |
| ನಿಶಾನೆ ಪಿ.27(ಎ) | : | ಪ್ರಾಸಾ.2 ರವರ ಸಹಿ |
| ನಿಶಾನೆ ಪಿ.27(ಬಿ) | : | ಪ್ರಾಸಾ.4 ರವರ ಸಹಿ |
| ನಿಶಾನೆ ಪಿ.27(ಸಿ) | : | ಪ್ರಾಸಾ.13 ರವರ ಸಹಿ |
| ನಿಶಾನೆ ಪಿ.28 | : | 2 ನೇ ಆರೋಪಿಯ ಸಮಜಾಯಿಷಿ |
| ನಿಶಾನೆ ಪಿ.28(ಎ) | : | ಪ್ರಾಸಾ.2 ರವರ ಸಹಿ |
| ನಿಶಾನೆ ಪಿ.28(ಬಿ) | : | ಪ್ರಾಸಾ.4 ರವರ ಸಹಿ |
| ನಿಶಾನೆ ಪಿ.28(ಸಿ) | : | ಪ್ರಾಸಾ.13 ರವರ ಸಹಿ |
| ನಿಶಾನೆ ಪಿ.29 | : | 1 ನೇ ಆರೋಪಿಯ ಸಮಜಾಯಿಷಿ |
| ನಿಶಾನೆ ಪಿ.29(ಎ) | : | ಪ್ರಾಸಾ.2 ರವರ ಸಹಿ |
| ನಿಶಾನೆ ಪಿ.29(ಬಿ) | : | ಪ್ರಾಸಾ.4 ರವರ ಸಹಿ |

| | | |
|---|---|---|
| ನಿಶಾನೆ ಪಿ.29(ಸಿ) | : | ಪ್ರಾಸಾ.13 ರವರ ಸಹಿ |
| ನಿಶಾನೆ ಪಿ.30 | : | ಪಿಡಬ್ಲ್ಯೂಡಿ ಇವರು ಮಾಡಿದ ನಕ್ಷೆ |
| ನಿಶಾನೆ ಪಿ.30(ಎ) | : | ಪ್ರಾಸಾ.2 ರವರ ಸಹಿ |
| ನಿಶಾನೆ ಪಿ.30(ಬಿ) | : | ಪ್ರಾಸಾ.7 ರವರ ಸಹಿ |
| ನಿಶಾನೆ ಪಿ.31 | : | ಮಾದರಿ ಸೀಲು |
| ನಿಶಾನೆ ಪಿ.31(ಎ) | : | ಪ್ರಾಸಾ.2 ರವರ ಸಹಿ |
| ನಿಶಾನೆ ಪಿ.31(ಬಿ) | : | ಪ್ರಾಸಾ.4 ರವರ ಸಹಿ |
| ನಿಶಾನೆ ಪಿ.31(ಸಿ) | : | ಪ್ರಾಸಾ.13 ರವರ ಸಹಿ |
| ನಿಶಾನೆ ಪಿ.32 | : | ಅಭಿಯೋಜನಾ ಮಂಜೂರಾತಿ |
| ನಿಶಾನೆ ಪಿ.32(ಎ) | : | ಪ್ರಾಸಾ.3 ರವರ ಸಹಿ |
| ನಿಶಾನೆ ಪಿ.33 | : | ಪಂಚನಾಮ |
| ನಿಶಾನೆ ಪಿ.33(ಎ) | : | ಪ್ರಾಸಾ.4 ರವರ ಸಹಿ |
| ನಿಶಾನೆ ಪಿ.33(ಬಿ) | : | ಪ್ರಾಸಾ.13 ರವರ ಸಹಿ |
| ನಿಶಾನೆ ಪಿ.34 | : | 2 ನೇ ಆರೋಪಿಯ ಅರೆಸ್ಟ ನೋಟೀಸ್ |
| ನಿಶಾನೆ ಪಿ.34(ಎ) | : | ಪ್ರಾಸಾ.13 ರವರ ಸಹಿ |
| ನಿಶಾನೆ ಪಿ.35 | : | ತಹಶೀಲ್ದಾರ್ ಇವರ ಪತ್ರ |
| ನಿಶಾನೆ ಪಿ.35(ಎ) | : | ಪ್ರಾಸಾ.6 ರವರ ಸಹಿ |
| ನಿಶಾನೆ ಪಿ.36 | : | ಪುಟ ಸಂಖ್ಯೆ 58 ರಿಂದ 71 ರ ದಾಖಲೆಗಳು |
| ನಿಶಾನೆ ಪಿ.37 | : | ದಿಃ04.02.2011 ರ ಬೆಸ್ಕಾಂ ಇವರ ಪತ್ರ |
| ನಿಶಾನೆ ಪಿ.38 | : | ಎಫ್.ಎಸ್.ಎಲ್ ವರದಿ |
| ನಿಶಾನೆ ಪಿ.39 | : | ಲೋಕೋಪಯೋಗಿ ಇಲಾಖೆಯವರ ಪತ್ರ |
| ನಿಶಾನೆ ಪಿ.39(ಎ) | : | ಪ್ರಾಸಾ.12 ರವರ ಸಹಿ |
| ನಿಶಾನೆ ಪಿ.40 | : | ಪ್ರಾಸಾ.9 ರವರ ಹೇಳಿಕೆ |
| ನಿಶಾನೆ ಪಿ.41 ಮತ್ತು ಪಿ.42 | : | ದಿಃ19.04.2012 ರ ತಹಶೀಲ್ದಾರ್ ಇವರ ಪತ್ರ |
| ನಿಶಾನೆ ಪಿ.41(ಎ) | : | ಪ್ರಾಸಾ.10 ರವರ ಸಹಿ |
| ನಿಶಾನೆ ಪಿ.42(ಎ) | : | ಪ್ರಾಸಾ.10 ರವರ ಸಹಿ |
| ನಿಶಾನೆ ಪಿ.43 | : | 1 ನೇ ಆರೋಪಿಯ ಸೇವಾ ವಿವರ |

| | | |
|---|---|---|
| ನಿಶಾನೆ ಪಿ.43(ಎ) | : | ಪ್ರಾಸಾ.11 ರವರ ಸಹಿ |
| ನಿಶಾನೆ ಪಿ.43(ಬಿ) | : | ಪ್ರಾಸಾ.13 ರವರ ಸಹಿ |
| ನಿಶಾನೆ ಪಿ.44 | : | 2 ನೇ ಆರೋಪಿಯ ಸೇವಾ ವಿವರ |
| ನಿಶಾನೆ ಪಿ.44(ಎ) | : | ಪ್ರಾಸಾ.11 ರವರ ಸಹಿ |
| ನಿಶಾನೆ ಪಿ.44(ಬಿ) | : | ಪ್ರಾಸಾ.13 ರವರ ಸಹಿ |
| ನಿಶಾನೆ ಪಿ.45 | : | ಪ್ರಥಮ ವರ್ತಮಾನ ವರದಿ |
| ನಿಶಾನೆ ಪಿ.45(ಎ) | : | ಪ್ರಾಸಾ.13 ರವರ ಸಹಿ |
| ನಿಶಾನೆ ಪಿ.46 | : | ಭೂಮಿ ಅರ್ಜಿಯ ಸ್ವೀಕೃತಿ |
| ನಿಶಾನೆ ಪಿ.47 | : | ಹಿಂಬರಹ |
| ನಿಶಾನೆ ಪಿ.48 | : | ಜಿಲ್ಲಾ ನೋಂದಣಾಧಿಕಾರಿಗಳು ಇವರಿಗೆ ಬರೆದ ಪತ್ರ |
| ನಿಶಾನೆ ಪಿ.48(ಎ) | : | ಪ್ರಾಸಾ.13 ರವರ ಸಹಿ |
| ನಿಶಾನೆ ಪಿ.49 | : | ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಪತ್ರ |
| ನಿಶಾನೆ ಪಿ.49(ಎ) | : | ಪ್ರಾಸಾ.13 ರವರ ಸಹಿ |
| ನಿಶಾನೆ ಪಿ.50 | : | ಪಿ.ಎಫ್.ನಂ.9/2010 |
| ನಿಶಾನೆ ಪಿ.50(ಎ) | : | ಪ್ರಾಸಾ.13 ರವರ ಸಹಿ |
| ನಿಶಾನೆ ಪಿ.51 | : | ಪಿ.ಎಫ್.ನಂ.10/2010 |
| ನಿಶಾನೆ ಪಿ.51(ಎ) | : | ಪ್ರಾಸಾ.13 ರವರ ಸಹಿ |

ಆರೋಪಿತರ ಪರವಾಗಿ ಮಾಡಿದ ಸಾಕ್ಷಿಗಳ ವಿವರಃ-

------ಇಲ್ಲ------

ಆರೋಪಿತರ ಪರವಾಗಿ ಮಾಡಿದ ದಾಖಲೆಗಳ ವಿವರಃ-

------ಇಲ್ಲ------

ಅಭಿಯೋಜನೆ ಪರವಾಗಿ ಗುರುತಿಸಿಕೊಂಡ ಮು.ಮಾ.ಗಳ ವಿವರಃ-

| | | |
|---|---|---|
| ಮು.ಮಾ.1 | : | ರೂ.500 ಮುಖಬೆಲೆಯ 8 ನೋಟುಗಳು ಮತ್ತು ರೂ.1000 ಮುಖಬೆಲೆಯ 21 ನೋಟುಗಳು |
| ಮು.ಮಾ.2 | : | ಮಾದರಿ ಸೋಡಿಯಂದ ಕಾರ್ಬೋನೇಟ್ ದ್ರಾವಣ (ಆರ್ಟಿಕಲ್ ನಂ.1) |
| ಮು.ಮಾ.3 | : | ಪಂಚ-1 ರವರ ಕೈಯನ್ನು ತೊಳೆಸಿದ ದ್ರಾವಣ (ಆರ್ಟಿಕಲ್ ನಂ.2) |
| ಮು.ಮಾ.4 | : | ಮಾದರಿ ಸೋಡಿಯಂ ಕಾರ್ಬೋನೇಟ್ ದ್ರಾವಣ (ಆರ್ಟಿಕಲ್ ನಂ.3) |
| ಮು.ಮಾ.5 | : | 2 ನೇ ಆರೋಪಿಯ ಬಲಗೈ ತೊಳೆಸಿದ ದ್ರಾವಣ (ಆರ್ಟಿಕಲ್ ನಂ.4) |
| ಮು.ಮಾ.6 | : | 2 ನೇ ಆರೋಪಿಯ ಎಡಗೈ ತೊಳೆಸಿದ ದ್ರಾವಣ (ಆರ್ಟಿಕಲ್ ನಂ.5) |
| ಮು.ಮಾ.7 | : | 2 ನೇ ಆರೋಪಿ ಪ್ಯಾಂಟನ್ನು ತೊಳೆಸಿದ ದ್ರಾವಣ |
| ಮು.ಮಾ.8 | : | ಒಂದು ಪ್ಯಾಂಟ್ |
| ಮು.ಮಾ.9 | : | ಸೀಲು |

**(ಎಂ.ಹೆಚ್. ಅಣ್ಣಯ್ಯನವರ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಮನಗರ.

*****